# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ 05–03–2018ರಂದು ಬೆಳಿಗ್ಗೆ 11.00 ಗಂಟೆಗೆ ಜರುಗಿದ ಹಾಗೂ ದಿನಾಂಕ 06–03–2018ರಂದು ಬೆಳಿಗ್ಗೆ 10.30ಕ್ಕೆ ಮುಂದುವರೆದ ಸಿಂಡಿಕೇಟಿನ ಎರಡನೇ ಸಾಮಾನ್ಯ ಸಭೆಯ ನಡೆವಳಿಗಳು.**

**ಹಾಜರಿದ್ದ ಸದಸ್ಯರು:**

| | | |
|---|---|---|
| 1. ಪ್ರೊ.ಸಿ.ಬಸವರಾಜು | – | ಕುಲಪತಿಗಳು(ಪ್ರಭಾರ) ಹಾಗೂ ಅಧ್ಯಕ್ಷರು |
| 2. ಡಾ. ನಿಂಗಮ್ಮ ಸಿ.ಬೆಟ್ಸೂರ್ | – | ಸದಸ್ಯರು |
| 3. ಪ್ರೊ.ಎಸ್.ಎಲ್.ಸುರೇಶ್ | – | ಸದಸ್ಯರು |
| 4. ಡಾ.ಎ.ಟಿ.ಶಿವರಾಮು | – | ಸದಸ್ಯರು |
| 5. ಶ್ರೀಮತಿ ಎಂ.ಎನ್.ಪೊನ್ನಮ್ಮ | – | ಸದಸ್ಯರು |
| 6. ಶ್ರೀ ಕೆ.ಎಂ.ಕಾಳೇಗೌಡ | – | ಸದಸ್ಯರು |
| 7. ಪ್ರೊ. ಡಿ. ನಂಜುಂಡಯ್ಯ | – | ಸದಸ್ಯರು |
| 8. ಶ್ರೀ ಲಯನ್ ಹೆಚ್. ರಮೇಶ್ | – | ಸದಸ್ಯರು |
| 9. ಶ್ರೀ ಮಹಮದ್ಅಬ್ದುಸ್ಸಲಾಂ | – | ಸದಸ್ಯರು |
| 10. ಶ್ರೀ ಕುಮಾರ್ | – | ಸದಸ್ಯರು |
| 11. ಶ್ರೀಮತಿ ಶೃತಿತರುಣ್‌ಗಿರಿ | – | ಸದಸ್ಯರು |
| 12. ಶ್ರೀ ಎಂ.ಎಸ್.ಎಸ್. ಕುಮಾರ್ | – | ಸದಸ್ಯರು |
| 13. ಪ್ರೊ. ಜೆ. ಸೋಮಶೇಖರ್ | – | ಸದಸ್ಯರು |
| ಕುಲಸಚಿವ(ಪರೀಕ್ಷಾಂಗ) | – | ಸದಸ್ಯರು |
| 14. ಶ್ರೀಮತಿ ಡಿ.ಭಾರತಿ, ಕೆ.ಎ.ಎಸ್ | – | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

**ಹಾಜರಾಗದ ಸದಸ್ಯರು:**

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
5. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
6. ಕು.ಸಹನಾ ಶಿವಪ್ಪ, ಸಿಂಡಿಕೇಟ್‌ಸದಸ್ಯರು

ಮೊದಲಿಗೆ ಸನ್ಮಾನ್ಯ ಕುಲಪತಿಗಳು ಸಿಂಡಿಕೇಟ್‌ನ ಎರಡನೇ ಸಾಮಾನ್ಯ ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಆಹ್ವಾನಿಸಿ, ಇತ್ತೀಚೆಗಷ್ಟೇ ವಿಧಿವಶರಾದ ರೈತ ಮುಖಂಡ, ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರು, ಜನಪ್ರಿಯ ವ್ಯಕ್ತಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಶಿಕ್ಷಣ ಮಂಡಳಿಯ ಮಾಜಿ ಸದಸ್ಯರಾದ ಶ್ರೀ ಪುಟ್ಟಣ್ಣಯ್ಯರವರ ನಿಧನದ ವಿಷಯವನ್ನು ಸಿಂಡಿಕೇಟ್ ಗಮನಕ್ಕೆ ತಂದರು. ಮತ್ತು ಅವರ ಗೌರವಾರ್ಥ ಸಭೆಯಲ್ಲಿ ಎರಡು ನಿಮಿಷಗಳ ಮೌನ ಆಚರಣೆಯೊಂದಿಗೆ ಮೃತರ ಆತ್ಮಕ್ಕೆ ಶಾಂತಿ ಕೋರಲಾಯಿತು.

ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಎಂ.ಎಸ್.ಎಸ್.ಕುಮಾರ್‌ರವರು ಈ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಕೇಂದ್ರ ಹಾಗೂ ಸ್ನಾತಕೋತ್ತರ ಅಧ್ಯಯನ

ವಿಭಾಗಗಳಲ್ಲಿನ ಅವಶ್ಯಕವಾದ ಮೂಲಭೂತ ಸೌಲಭ್ಯಗಳು ಹಾಗೂ ಇತರೆ ಕುಂದುಕೊರತೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಒಂದು ಸಮಿತಿಯನ್ನು ರಚಿಸಲಾಗಿತ್ತು. ಹಾಗೆಯೇ ವಿವಿಧ ಅಧ್ಯಯನ ವಿಭಾಗಗಳಲ್ಲಿ ನಿವೃತ್ತರಾಗಿರುವ ಪ್ರಾಧ್ಯಾಪಕರು ತಮಗೆ ಹಂಚಿಕೆಯಾಗಿದ್ದ ಕೊಠಡಿಗಳನ್ನು ತೆರವುಗೊಳಿಸಲು ಕ್ರಮಕೈಗೊಳ್ಳುವಂತೆಯೂ ವಿಜ್ಞಾನಭವನದಲ್ಲಿ ಅಂತಹವರೆಲ್ಲರಿಗೂ ಅನ್ವಯವಾಗುವಂತೆ ಪ್ರತ್ಯೇಕವಾಗಿ ಒಂದು ಕೊಠಡಿಯನ್ನು ಹಂಚಿಕೆಮಾಡಲು ಸಿಂಡಿಕೇಟ್ ನಿರ್ಣಯಿಸಿದ್ದರೂ ಈ ಬಗ್ಗೆ ಯಾವುದೇ ಕ್ರಮತೆಗೆದುಕೊಳ್ಳದೇ ಇರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು.

ಕುಲಸಚಿವರು ಮಾತನಾಡುತ್ತಾ, ಸಂಬಂಧಪಟ್ಟ ವಿಷಯದ ಬಗ್ಗೆ ಎಲ್ಲಾ ಅಧ್ಯಕ್ಷರು/ ಪ್ರಾಧ್ಯಾಪಕರುಗಳಿಗೆ ವಿಶ್ವವಿದ್ಯಾನಿಲಯದ ಆಡಳಿತ ವಿಭಾಗದಿಂದ ಒಂದು ಸುತ್ತೋಲೆಯನ್ನು ಹೊರಡಿಸಿ ಎಲ್ಲಾ ಅಧ್ಯಕ್ಷರು/ ಪ್ರಾಧ್ಯಾಪಕರುಗಳಿಗೆ ಕೊಠಡಿಗಳನ್ನು ತೆರವು ಮಾಡುವ ಬಗ್ಗೆ ತಿಳಿಸಲಾಗಿರುವ ಬಗ್ಗೆ ಸಭೆಗೆ ತಿಳಿಸಿದರು.

ಮಾನ್ಯಕುಲಪತಿಗಳು ಸಿಂಡಿಕೇಟ್ ಸದಸ್ಯರು ಆಕ್ಷೇಪಿಸಿರುವ ವಿಷಯಗಳ ಬಗ್ಗೆ ಗಮನಹರಿಸಿ ಒಂದು ವಾರದೊಳಗೆ ಸದರಿ ಸಮಿತಿಗೆ ಚಾಲನೆ ನೀಡಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು ಮತ್ತು ಅಧ್ಯಯನ ವಿಭಾಗಗಳಲ್ಲಿನ ಕೊಠಡಿಗಳನ್ನು ತೆರವುಗೊಳಿಸುವ ಸಂಬಂಧ ಒಂದು ವರದಿಯನ್ನು ಸಲ್ಲಿಸುವ ಸಲುವಾಗಿ ಈ ಕೆಳಕಂಡಂತೆ ಒಂದು ಸಿಂಡಿಕೇಟ್ ಉಪಸಮಿತಿಯನ್ನು ರಚಿಸಲು ಸಿಂಡಿಕೇಟ್ ತೀರ್ಮಾನಿಸಿತು.

1. ಪ್ರೊ. ನಂಜುಂಡಯ್ಯ, ಸಿಂಡಿಕೇಟ್ ಸದಸ್ಯರು
2. ಶ್ರೀ ಲಯನ್ ರಮೇಶ್, ಸಿಂಡಿಕೇಟ್ ಸದಸ್ಯರು
3. ಶ್ರೀ ಎಂ.ಎಸ್.ಎಸ್.ಕುಮಾರ್, ಸಿಂಡಿಕೇಟ್ ಸದಸ್ಯರು
4. ಡಾ.ನಿಂಗಮ್ಮ ಬೆಟ್ಸೂರ್, ಸಿಂಡಿಕೇಟ್ ಸದಸ್ಯರು ಹಾಗೂ ಶಿಕ್ಷಣ ನಿಕಾಯದ ಡೀನರು
5. ಉಪಕುಲಸಚಿವರ (ಸಾಮಾನ್ಯ) – ಸಂಚಾಲಕರು

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| 1 | ದಿನಾಂಕ 18–01–2018ರಂದು ನಡೆದ ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಬಗ್ಗೆ |
| **ತೀರ್ಮಾನ** | ದೃಢೀಕರಿಸಲಾಯಿತು. |
| 2 | ದಿನಾಂಕ 18–01–2018 ರಂದು ನಡೆದ ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಕ್ರಮ ಕೈಗೊಂಡ ವರದಿ |
| **ತೀರ್ಮಾನ** | ದಿನಾಂಕ 18-01–2018 ರಂದು ಜರುಗಿದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ 2018/1.16ಕ್ಕೆ ಸಂಬಂಧಿಸಿದಂತೆ ಪ್ರಕಟಿಸದೇ ಬಾಕಿ ಉಳಿದಿರುವ ಮತ್ತೀತರ ಎಲ್ಲಾ ಹುದ್ದೆಗಳ ಬೋಧಕೇತರ ವರ್ಗದವರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಕ್ಷಿಪ್ರಗತಿಯಲ್ಲಿ ಸಿದ್ಧಪಡಿಸಿ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳುವುದು;<br>**ವಿಷಯ ಸಂಖ್ಯೆ:2018/1.18ಕ್ಕೆ** ಸಂಬಂಧಪಟ್ಟಂತೆ **"ಚೈನೀಸ್ ಪ್ರೋಗ್ರಾಂ"** ಕಾರ್ಯನಿರ್ವಹಿಸುವ ಹಾಗೂ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ಸಿಬ್ಬಂದಿವರ್ಗದವರ ಇಎಸ್ಐ–ಇಪಿಎಫ್ ಸೌಲಭ್ಯಗಳನ್ನು ನಿಯಮಾನುಸಾರ ವಿಸ್ತರಿಸಿ ಅದರ ನಿರ್ವಹಣೆಯನ್ನು ಅಲ್ಲಿನ ಕೋ–ಆರ್ಡಿನೇಟರ್ ವಹಿಸಿಕೊಳ್ಳುವಂತೆ ಸಿಂಡಿಕೇಟ್ ತೀರ್ಮಾನಿಸಿತು.<br>ಮೇಲಿನ ತಿದ್ದುಪಡಿ/ಸೇರ್ಪಡೆಯೊಂದಿಗೆ ದಿನಾಂಕ 18-01-2018 ರಂದು ನಡೆದ ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆಯ ನಡೆವಳಿಯನ್ನು ಸ್ಥಿರೀಕರಿಸಲಾಯಿತು. |

| | |
|---|---|
| **2018/2.1** | Continuation of Online and Outreach (Foreign) Programmes - reg |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿನ ಕೋರ್ಸ್‌ಗಳ ಔಟ್‌ರೀಚ್ ಪ್ರೋಗ್ರಾಮ್‌ಗಳನ್ನು ಹೊರದೇಶಗಳಲ್ಲಿ ಸದ್ಯಕ್ಕೆಮುಂದುವರೆಸದಿರಲು ಮತ್ತು ಆನ್‌ಲೈನ್ ಪ್ರೋಗ್ರಾಮ್ ಕೋರ್ಸ್‌ಗಳನ್ನು ಮುಂದುವರೆಸಲು ಎಂ.ಎಚ್.ಆರ್.ಡಿ. ಯಿಂದ ಅನುಮೋದನೆಗೊಂಡಿರುವ ಕರಡು ರೆಗ್ಯೂಲೇಷನ್ಸ್ ಯುಜಿಸಿಯಿಂದ ಅನುಮೋದನೆಗೊಂಡ ನಂತರ ಸದರಿ ವಿಷಯವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮತ್ತು ಅನುಮೋದನೆಗೆ ಮರುಮಂಡಿಸಲು ನಿರ್ಣಯಿಸಿತು. |
| **2018/2.2** | ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನದ ರಜತ ಮಹೋತ್ಸವ ಆಚರಣೆಗೆ ಅನುದಾನವನ್ನು ಮಂಜೂರು ಮಾಡುವ ಬಗ್ಗೆ. |
| **ತೀರ್ಮಾನ** | ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಮತ್ತು ಸರ್ ಎಂ.ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರ, ತೂಬಿನಕೆರೆ ಮಂಡ್ಯ ಕೇಂದ್ರಗಳು ಸ್ಥಾಪನೆಯಾಗಿ 25 ವರ್ಷಗಳನ್ನು ಪೂರೈಸಿರುವುದರಿಂದಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ ರಜತ ಮಹೋತ್ಸವ ಆಚರಿಸುವ ಸಲುವಾಗಿ ಸಂಬಂಧಪಟ್ಟ ಕೇಂದ್ರಗಳಿಂದ ಒಂದು ಕ್ರಿಯಾಯೋಜನೆಯನ್ನು ಪಡೆಯಲು ಮತ್ತು ಇದಕ್ಕಾಗಿ 2018–19ನೇ ಸಾಲಿನ ಆಯವ್ಯಯದಲ್ಲಿ ಹಣವನ್ನು ನಿಗಧಿಪಡಿಸಲು ಸಿಂಡಿಕೇಟ್ ಅನುಮೋದಿಸಿತ್ತಲ್ಲದೇ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿಸಲು ಕುಲಪತಿ ಹಾಗೂ ಕುಲಸಚಿವರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಸಿಂಡಿಕೇಟ್ ನಿರ್ಣಯಿಸಿತು. |
| **2018/2.3** | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಕುದುರೆಮಾಳ ಪ್ರದೇಶದ ಸರ್ವೇ ನಂ.41ರಲ್ಲಿನ 2–10 ಎಕರೆ ಪ್ರದೇಶವನ್ನು ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಹಸ್ತಾಂತರಿಸುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಸರ್ವೆ ನಂ.41ರಲ್ಲಿ 2.10 ಎಕರೆ ಪ್ರದೇಶವನ್ನು ಈಗಾಗಲೇ ಮನೆ ನಿರ್ಮಿಸಿಕೊಂಡು ವಾಸವಿರುವ ಪೌರ ಕಾರ್ಮಿಕ ಕುಟುಂಬಗಳಿಗೆ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಹಕ್ಕುಪತ್ರಗಳನ್ನು ವಿತರಿಸಲು ಅನುಮತಿಕೋರಿರುವುದನ್ನು ಸಿಂಡಿಕೇಟ್ ಸಭೆಯ ತೀರ್ಮಾನದಂತೆ ದಿನಾಂಕ 15–05–2016 ಮತ್ತು ದಿ. 22–09–2016ರಂದು ಸರ್ಕಾರಕ್ಕೆ ಪತ್ರ ಬರೆಯಲಾಗಿರುವುದನ್ನು ಗಮನಿಸಿದ ಸಿಂಡಿಕೇಟ್ ಈ ಸಂಬಂಧ ವಿ.ವಿ.ಕಾಯ್ದೆಯ ಪ್ರಕಾರ ಸರ್ಕಾರದ ಅನುಮತಿ ಅತ್ಯಾವಶ್ಯಕವಾಗಿರುವುದರಿಂದ ಮತ್ತೊಂದು ಜ್ಞಾಪನಾ ಪತ್ರವನ್ನು ಬರೆಯಲು ಮತ್ತು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಸದರಿ ಜಾಗಕ್ಕೆ ಪರ್ಯಾಯವಾಗಿ 2.10 ಎಕರೆ ಸರ್ಕಾರಿ ಭೂಮಿಯನ್ನು ಬೇರೆಡೆ ದೊರಕಿಸಿಕೊಡುವಂತೆ ಸರ್ಕಾರಕ್ಕೆ, ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಮತ್ತು ಆಯುಕ್ತರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಪತ್ರ ಮುಖೇನ ಕೋರಲು ಸಿಂಡಿಕೇಟ್ ನಿರ್ಣಯಿಸಿತು. |
| **2018/2.4** | ವಿಶ್ವವಿದ್ಯಾನಿಲಯದ ಆಯವ್ಯಯದಲ್ಲಿ ಕಿರು ಸಂಶೋಧನಾ ಯೋಜನೆಗೆ ಮೀಸಲಿರಿಸಿರುವ ರೂ.40/– ಲಕ್ಷಗಳ ಅನುದಾನ ವಿಂಗಡಣೆ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಆಯವ್ಯಯದಲ್ಲಿ ಕಿರು ಸಂಶೋಧನಾ ಯೋಜನೆಗೆ ಮೀಸಲಿರಿಸಿರುವ ರೂ.40 ಲಕ್ಷಗಳ ಅನುದಾನವನ್ನು ಸದ್ಬಳಕೆ ಮಾಡಿಕೊಳ್ಳುವ ಸಂಬಂಧ, ವಿಶ್ವವಿದ್ಯಾನಿಲಯವು ಈಗಾಗಲೇ ತೆಗೆದುಕೊಂಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/2.5** | ಎರಡು ಹಳೆಯ ವಾಹನಗಳ ಬದಲಾಗಿ ಎರಡು ಹೊಸ ವಾಹನಗಳನ್ನು ಖರೀದಿಸುವ ಬಗೆಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದಲ್ಲಿ ಲಭ್ಯವಿರುವ ವಾಹನಗಳನ್ನು ಯಾವ್ಯಾವ ಅಧಿಕಾರಿಗಳಿಗೆ ನಿಯೋಜಿಸಲಾಗಿದೆ. ಮತ್ತು ಈ ವಾಹನಗಳು ಯಾವ್ಯಾವ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ. ಹೊಸ ವಾಹನಗಳನ್ನು ಖರೀದಿಸುವ ಅಗತ್ಯತೆ ಇದೆಯೇ ಎಂಬೆಲ್ಲಾ ಮಾಹಿತಿಗಳೊಂದಿಗೆ ಸದರಿ ವಿಷಯವನ್ನು ಸಿಂಡಿಕೇಟ್‌ಗೆ ಮರುಮಂಡಿಸಲು ತೀರ್ಮಾನಿಸಿತು. |
| **2018/2.6** | ಡಾ. ಅನುರಾಧ.ಎನ್, ಸಹ ಪ್ರಾಧ್ಯಾಪಕರು, ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು, ಮೈಸೂರು ಇವರ ವಿರುದ್ಧ ನಡೆದ ಇಲಾಖಾ ವಿಚಾರಣೆಯ ವರದಿಯ ಬಗ್ಗೆ. |
| **ತೀರ್ಮಾನ** | ಡಾ. ಅನುರಾಧ ಎನ್. ಸಹ ಪ್ರಾಧ್ಯಾಪಕರು, ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು, ಮೈಸೂರು ಇವರ ವಿರುದ್ದ ಕಾಲೇಜಿನ ಪ್ರಾಂಶುಪಾಲರು ಮತ್ತು ವಿದ್ಯಾರ್ಥಿಗಳು ದೂರು ಸಲ್ಲಿಸಿದ್ದ ಸಂಬಂಧ ಹಾಗೂ ಕೆಲಸಕ್ಕೆ ಗೈರು ಹಾಜರಿಯಾಗಿರುವ ಕುರಿತು ರಚಿಸಲಾಗಿದ್ದ ಸಿಂಡಿಕೇಟ್ ಉಪಸಮಿತಿಯು ಡಾ.ಅನುರಾಧ ಎನ್ ರವರ ವಿರುದ್ದ ಸಂಪೂರ್ಣ ವಿಚಾರಣೆ ನಡೆಸಿ, ಸಿಂಡಿಕೇಟ್ ಉಪಸಮಿತಿಯ ವರದಿಯನ್ನು ಪರಿಶೀಲಿಸಿದ ಸಭೆಯು ಡಾ.ಅನುರಾಧ.ಎನ್. ಸಹ ಪ್ರಾಧ್ಯಾಪಕರು ಇವರ 2 ವರ್ಷಗಳ ಗೈರು ಹಾಜರಿಯನ್ನುLeave without salary ಎಂದು ಪರಿಗಣಿಸಲು ತೀರ್ಮಾನಿಸಿತು. ಮತ್ತು ಸದರಿಯವರುಸ್ವಯಂ ನಿವೃತ್ತಿ ತೆಗೆದುಕೊಳ್ಳುವುದರ ಬಗ್ಗೆ ಪರಿಶೀಲಿಸುವುದು ಸಾಧ್ಯವಾಗದಿದ್ದಲ್ಲಿ ಕೆ.ಸಿ.ಎಸ್.ಆರ್ ನಿಯಮದಂತೆ ಅನುಸರಿಸಬೇಕಾದ ಕ್ರಮವನ್ನು ಕುಲಸಚಿವರು ನಿರ್ವಹಿಸಲು ಸೂಚಿಸಿ, ಸದರಿ ಪ್ರಕರಣವನ್ನು **ಮುಕ್ತಾಯಗೊಳಿಸಲು** ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2018/2.7** | 1975–77ನೇ ಸಾಲಿನಲ್ಲಿ ಪಡೆದ ಬಿ.ಎ. ಕೋರ್ಸಿನ ಅಂಕಪಟ್ಟಿಯಲ್ಲಿ ನಮೂದಾಗಿರುವ Not Completd Lower Examination (NCL) ಅನ್ನು ತೆಗೆದು ದರ್ಜೆ ನೀಡುವ ಬಗೆಗೆ. |
| **ತೀರ್ಮಾನ** | ಶ್ರೀ ನಾಗೇಶ್‌ಗೌಡ ಓ.ಇ, ಮೈಸೂರು ಇವರು ತಮ್ಮ ಮನವಿ ಪತ್ರದಲ್ಲಿ 1975–77ರ ಅವಧಿಯಲ್ಲಿ ಬಿ.ಎ ಪದವಿಯನ್ನು ಪಡೆದಿದ್ದು ಅಂಕಪಟ್ಟಿ ಮತ್ತು ಪದವಿಪ್ರಮಾಣಪತ್ರದಲ್ಲಿ ಲೋಪದೋಷಗಳಿರುವುದರಿಂದ ಮತ್ತು ಇದು ಸುಮಾರು 40 ವರ್ಷಗಳ ಹಳೆಯದಾಗಿರುವುದರಿಂದ ಸದರಿಯವರ ಕೋರಿಕೆ ಮೇರೆಗೆ ನಿಯಮಾನುಸಾರ ಲಭ್ಯವಿರುವ ದಾಖಲೆಗಳ ಅನ್ವಯ ಆಗಿರುವ ತಪ್ಪನ್ನು ಸರಿಪಡಿಸಿ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರವನ್ನು ವಿತರಿಸಲು ಸಿಂಡಿಕೇಟ್ ನಿರ್ಣಯಿಸಿತು. |
| **2018/2.8** | ಡಾ. ಪ್ರವೀಣ.ಕೆ.ಬಿ. ಸಹಾಯಕ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಬ್ಯಾಂಕಾಗ್‌ಗೆ ಶೈಕ್ಷಣಿಕ ಪ್ರವಾಸದ ನಿಮಿತ್ತ ತೆರಳಲು ಅನುಮತಿ ನೀಡಿರುವ ಬಗ್ಗೆ. |
| **ತೀರ್ಮಾನ** | ಡಾ. ಪ್ರವೀಣ. ಕೆ.ಬಿ. ಸಹಾಯಕ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಶೈಕ್ಷಣಿಕ ಪ್ರವಾಸಕ್ಕಾಗಿ, ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆ ಇಲ್ಲದಂತೆ ದಿನಾಂಕ 06–02–2018 ರಿಂದ 08–02–2018 ರವರೆಗೆ ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ಬ್ಯಾಂಕಾಗ್ ದೇಶಕ್ಕೆ ಭೇಟಿ ನೀಡಲು ವಿಶ್ವವಿದ್ಯಾನಿಲಯವು ಅನುಮತಿ ನೀಡಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/2.9** | ಅಶೋಕ ಯ. ತುಪಸುಂದರ, ಹಾಕಿ ತರಬೇತುದಾರರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ವರ್ಗಾವಣೆಯ ಬಗ್ಗೆ. |
| **ತೀರ್ಮಾನ** | 1. ಪ್ರಸ್ತುತ ದೈಹಿಕ ಶಿಕ್ಷಣ ವಿಭಾಗದಲ್ಲಿ ಹಾಕಿ ತರಬೇತುದಾರರು ಮತ್ತು ಕ್ರಿಕೆಟ್ ತರಬೇತುದಾರರ ಇಬ್ಬರು ಖಾಯಂ ಉದ್ಯೋಗಿಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಉಳಿದಂತೆ ತಾತ್ಕಾಲಿಕ ತರಬೇತುದಾರರು ಮಾತ್ರ ಕಾರ್ಯನಿರ್ವಹಿಸುತ್ತಿರುತ್ತಾರೆ. ಆದರೆ ಹಾಕಿ ತರಬೇತಿಗೆ ಶ್ರೀ ಅಶೋಕ ಯ.ತುಪಸುಂದರ, ಇವರನ್ನು ಹೊರತುಪಡಿಸಿದರೆ ಬೇರೆ ಯಾರು ಹಾಕಿ ತರಬೇತುದಾರರು ಇರುವುದಿಲ್ಲವಾದ್ದರಿಂದ, ವಿದ್ಯಾರ್ಥಿಗಳಿಗೆ ತೊಂದರೆಯಾಗುವ ಸಂಭವವಿರುತ್ತದೆ;<br>2. ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರು ಸದರಿರವರ ಸೇವೆಯು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅಗತ್ಯತೆ ಇದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಿಲ್ಲ; ಮತ್ತು<br>ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 58ರ ಪ್ರಕಾರ ವಿಶ್ವವಿದ್ಯಾನಿಲಯದ ನೌಕರರುಗಳು ಸರ್ಕಾರದಿಂದ ಆದೇಶ ಪಡೆದು ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆ ಹೊಂದಲು ಅವಕಾಶವಿರುತ್ತದೆ. ಆದರೆ, ಸದರಿರವರು ಸರ್ಕಾರದಿಂದ ಆದೇಶವನ್ನು ಸಹ ಪಡೆದಿರುವುದಿಲ್ಲವೆಂಬ ಅಂಶಗಳ ಬಗ್ಗೆ ಚರ್ಚಿಸಿದ ಸಿಂಡಿಕೇಟ್ ಅಶೋಕ ಯ. ತುಪಸುಂದರ, ಹಾಕಿ ತರಬೇತುದಾರರು, ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವರ್ಗಾವಣೆ ಮಾಡಲು ಸಾಧ್ಯವಿಲ್ಲವೆಂದು ಪರಿಗಣಿಸಲು(Not possible to transfer) ಸಿಂಡಿಕೇಟ್ ತೀರ್ಮಾನಿಸಿತು. |
| **2018/2.10** | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999ರ 4(ಜಿ) ಅಡಿಯಲ್ಲಿನ ವಿನಾಯಿತಿಯ ಅನ್ವಯ, ಪ್ರಶ್ನೆಪತ್ರಿಕೆ ಮುದ್ರಣ ಕಾರ್ಯವನ್ನು ಕೈಗೊಳ್ಳುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999ರ 4(ಜಿ) ಅಡಿಯಲ್ಲಿನ ವಿನಾಯಿತಿಯ ಅನ್ವಯ, ಪ್ರಶ್ನೆಪತ್ರಿಕೆ ಮುದ್ರಣ ಕಾರ್ಯವನ್ನು ಕೈಗೊಳ್ಳುವ ಸಂಬಂಧ ರಾಜ್ಯಪಾಲರ ಆದೇಶಾನುಸಾರ ಹೊರಡಿಸಿರುವ ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯ ಅಧೀನ ಕಾರ್ಯದರ್ಶಿಗಳ ಪ್ರಕಟಣೆಸಂಖ್ಯೆ ಪಿಡಬ್ಲೂಡಿ 433 ಎಫ್‌ಸಿ–3/2003 ದಿನಾಂಕ 19–08–2003ರ ಈ ಕೆಳಕಂಡ ಅಂಶಗಳನ್ನು ಸಿಂಡಿಕೇಟ್ ಗಮನಿಸಿತು.<br>**Notification**<br>In Exercise of the powers conferred under section 4(g) of Karnataka Transparency in Public Procurement Act, 1999, Government hereby nofify that provisions of the said Act shall not apply for Procurement of Printing of Question Papers for various examinations conducted by the following Universities.<br>1) Mysore University, Mysore.<br>2) Karnataka University, Dharwad.<br>3) Mangalore University, Mangalore<br>4) Gulbarga University, Gulbarga<br>5) Kuvempu University, B.R.Project.<br>6) Visveswaraiah Technical University, Belgaum.<br>7) Karnataka Open University, Mysore. |

| | |
|---|---|
| | ಮತ್ತು 2014–15ನೇ ಸಾಲಿನ ಲೆಕ್ಕಪತ್ರಗಳ ತಪಾಸಣೆಯಲ್ಲಿ ಲೆಕ್ಕಪರಿಶೋಧಕರು 2003ರಲ್ಲಿ ಪಡೆದ ಅಧಿಸೂಚನೆಯನ್ನು ಪುನರ್ ನವೀಕರಿಸದಿರುವುದರ ಬಗ್ಗೆ ಆಕ್ಷೇಪಣೆಯನ್ನು ಮಾಡಿರುವ ಬಗ್ಗೆ ಸರ್ಕಾರಕ್ಕೆ ವಿನಾಯಿತಿಯನ್ನು ಪುನರ್ ನವೀಕರಸಬೇಕೆಂದು ಪತ್ರಗಳನ್ನು ಬರೆಯಲಾಗಿರುವುದನ್ನು ಗಮನಿಸಿದ ಸಿಂಡಿಕೇಟ್ ದಿ.20.04.2018 ರಿಂದ ಶೈಕ್ಷಣಿಕ ವೇಳಾಪಟ್ಟಿ ಅನುಸಾರ ಪದವಿ ಪರೀಕ್ಷೆಗಳು ಪ್ರಾರಂಭವಾಗಲಿದ್ದು, ಮುದ್ರಣ ಕಾರ್ಯಗಳು ತ್ವರಿತವಾಗಿ ಕೈಗೆತ್ತಿಕೊಳ್ಳಲು ಸರ್ಕಾರದ ಅನುಮತಿಯನ್ನು ನಿರೀಕ್ಷಿಸಿ, ಶೈಕ್ಷಣಿಕ ವೇಳಾಪಟ್ಟಿಯ ಅನುಸಾರವಾಗಿ ಪರೀಕ್ಷೆಗಳನ್ನು ಸುಗಮವಾಗಿ ನಡೆಸುವ ದೃಷ್ಟಿಯಿಂದ ಹಾಗೂ ಪರೀಕ್ಷೆಗಳ ಪಾವಿತ್ರ್ಯತೆ ಮತ್ತು ಗೌಪ್ಯತೆ ಕಾಯ್ದುಕೊಳ್ಳುವ ದೃಷ್ಟಿಯಿಂದ 4(ಜಿ) ಅಡಿಯಲ್ಲಿ ನೀಡಿರುವ ವಿನಾಯಿತಿಯನ್ನು ಯಥಾಸ್ಥಿತಿಯಲ್ಲೇ ಮುಂದುವರೆಸಲು ಸಿಂಡಿಕೇಟ್ ಅನುಮತಿಸಿ, ಮುದ್ರಣಾ ಕಾರ್ಯದ ನಿರ್ವಹಣೆಯ ವೆಚ್ಚವನ್ನು (payment) ಭರಿಸಲು ಕ್ರಮವನ್ನು ಕೈಗೊಳ್ಳಲು ಸಹ ಸಭೆಯು ತೀರ್ಮಾನಿಸಿತು. |
| **2018/2.11** | ಜೆ.ಎಸ್.ಎಸ್. ರೀಸರ್ಚ್ ಫೌಂಡೇಶನ್, ಮೈಸೂರು ಮತ್ತು ಬಯೋ ಕಂಟ್ರೋಲ್ ರೀಸರ್ಚ್ ಲ್ಯಾಬೋರೇಟರೀಸ್, ಬೆಂಗಳೂರು, ಈ ಎರಡು ಸಂಸ್ಥೆಗಳ ಸಂಶೋಧನ ಕೇಂದ್ರದ ಮಾನ್ಯತೆಯನ್ನು ಸ್ಥಗಿತಗೊಳಿಸುವ ಬಗೆಗೆ. |
| **ತೀರ್ಮಾನ** | ಜೆ.ಎಸ್.ಎಸ್. ರೀಸರ್ಚ್ ಫೌಂಡೇಶನ್, ಮೈಸೂರು ಇಲ್ಲಿಗೆ ನೀಡಲಾಗಿದ್ದ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು 2017–18ನೇ ಸಾಲಿನಿಂದ ಸ್ಥಗಿತಗೊಳಿಸುವ ಬಗ್ಗೆ ಹಾಗೂ ಈ ಹಿಂದೆ ನೊಂದಣಿ ಪಡೆದು ಸಂಶೋಧನೆ ಕಾರ್ಯ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದಿಂದ ಪಿಹೆಚ್.ಡಿ ನೀಡುವವರೆಗೂ ಸದರಿ ಸಂಸ್ಥೆಯಲ್ಲೇ ಸಂಶೋಧನಾ ಕಾರ್ಯಕ್ಕೆ ಅಗತ್ಯ ಸೌಲಭ್ಯ ನೀಡಲು;<br>ಬಯೋ ಕಂಟ್ರೋಲ್ ರೀಸರ್ಚ್ ಲ್ಯಾಬೋರೇಟರೀಸ್, ಬೆಂಗಳೂರು ಈ ಸಂಸ್ಥೆಗೆ ವಿಶ್ವವಿದ್ಯಾನಿಲಯದಿಂದ ನೀಡಲಾಗಿದ್ದ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು 2017–18ನೇ ಸಾಲಿನಿಂದ ಸ್ಥಗಿತಗೊಳಿಸಲು ಕೋರಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/2.12** | ಗುಬ್ಬಿ ವೀರಣ್ಣ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ನೇಮಕ ಮಾಡುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿತವಾಗಿರುವ ಗುಬ್ಬಿವೀರಣ್ಣ ಪೀಠದ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಈ ಪೀಠದ ಸಂಬಂಧ ರಚಿತವಾಗಿರುವ ಅಧಿನಿಯಮ3(2)ರ ಅನ್ವಯ ಒಂದು ವರ್ಷದ ಅವಧಿಗೆ ಮಾಹೆಯಾನ ರೂ.8,000/–ಗಳ ಗೌರವಧನದೊಂದಿಗೆ ಶ್ರೀ ಜನಾರ್ಧನ (ಜನ್ನಿ), # 28, ಆರ್‌ಸಿಇ ಲೇಔಟ್, ಪ್ರಶಾಂತನಗರ, 2ನೇ ಕ್ರಾಸ್, ಬೋಗಾಧಿ 2ನೇ ಹಂತ, ಮೈಸೂರು – 570026 ಇವರನ್ನು ನೇಮಕ ಮಾಡಲು ಶ್ರೀ ಜನಾರ್ಧನ (ಜನ್ನಿ) ಅವರು ಸಂದರ್ಶಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಲು ಅಸಮ್ಮತಿ ವ್ಯಕ್ತಪಡಿಸಿದ್ದಲ್ಲಿ ಪ್ರೊ.ಹೆಚ್.ಎಸ್.ಉಮೇಶ್‌ರವರನ್ನು ನಿಯಮಾನುಸಾರ ನೇಮಕ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/2.13** | ಡಾ.ಡಿ.ಸಿ.ನಂಜುಂಡ ರವರು D.Litt ಪದವಿ ಪಡೆಯಲು ಮಹಾ ಪ್ರಬಂಧವನ್ನು ಶ್ರೀನಿವಾಸ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ** | ಡಾ. ಡಿ.ಸಿ.ನಂಜುಂಡ, ಸಹ ಪ್ರಾಧ್ಯಾಪಕರು ಹಾಗೂ ಪ್ರಭಾರ ನಿರ್ದೇಶಕರು, ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ನೀತಿ ಅಧ್ಯಯನ ಕೇಂದ್ರ, ಮಾನಸಗಂಗೋತ್ರಿ, ಮೈಸೂರು ಇವರು "Nature & Dynamics of Health Culture. A sociological examination on the changing health seeking behavior & Medical pluralism of the Rural Population in the Selected Districts of Karnataka State, India" ಎಂಬ ಶೀರ್ಷಿಕೆಯಡಿ ಮಹಾಪ್ರಬಂಧವನ್ನುರಚಿಸಿದ್ದು, D.Litt.ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಲು ಮೈಸೂರು ವಿ.ವಿ.ಯಿಂದ ದಿನಾಂಕ 23.04.2016ರಂದು ಅನುಮತಿ ಪಡೆದಿರುವುದನ್ನು ಗಮನಿಸಿದ ಸಿಂಡಿಕೇಟ್, ಸದರಿಯವರ ಮನವಿ ಮೇರೆಗೆ ಕರ್ನಾಟಕ ರಾಜ್ಯ ಸರ್ಕಾರ ಮತ್ತು ಯು.ಜಿ.ಸಿ.ಯಿಂದ ಮಾನ್ಯತೆ ಪಡೆದಿರುವ ಖಾಸಗಿ ವಿಶ್ವವಿದ್ಯಾನಿಲಯವಾಗಿರುವ ಶ್ರೀನಿವಾಸ ವಿಶ್ವವಿದ್ಯಾನಿಲಯ, ಮಂಗಳೂರು ಇಲ್ಲಿಗೆ D.Litt ಪದವಿಗಾಗಿ ಅವರು ಸಿದ್ದಪಡಿಸಿರುವ ಮಹಾಪ್ರಬಂಧವನ್ನು ಸಲ್ಲಿಸಲು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2018/2.14** | ಡಾ. ಶೋಭಾ ಜಗನ್ನಾಥ್, ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ ಅವರಿಗೆ ಯುನೈಟೆಡ್ ಗಿಲ್ಡ್‌ಫೋರ್ಡ್‌ಗೆ ತೆರಳಲು ಅನುಮತಿ ನೀಡಿರುವ ಬಗ್ಗೆ. |
| **ತೀರ್ಮಾನ** | ಡಾ. ಶೋಭಾ ಜಗನ್ನಾಥ್, ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ವಿಶ್ವವಿದ್ಯಾನಿಲಯದ ಮೇಲೆ ಯಾವ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ, ಅವರ ಹಕ್ಕಿನಲ್ಲಿರುವ ರಜೆಯನ್ನು ಉಪಯೋಗಿಸಿಕೊಂಡು ದಿನಾಂಕ 10–02–2018 ರಿಂದ 18–02–2018 ರವರೆಗೆ ಯುನೈಟೆಡ್ ಕಿಂಗಡಮ್‌ನ ಗಿಲ್ಡ್‌ಫೋರ್ಡ್‌ಗೆ ವೈಯಕ್ತಿಕ ಭೇಟಿ ನೀಡಲು ವಿಶ್ವವಿದ್ಯಾನಿಲಯವು ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/2.15** | ಪ್ಯಾಕೇಜ್ ಕಾಮಗಾರಿಗಳ ಬಾಕಿ ಹುಂಡಿಯ ಮೊತ್ತವನ್ನು Collaboration ಖಾತೆಯಲ್ಲಿ ಮರುಹೊಂದಾಣಿಕೆ ಮಾಡುವ ಬಗ್ಗೆ. |
| **ತೀರ್ಮಾನ** | 2017–18ನೇ ಸಾಲಿನಲ್ಲಿ ಆಯವ್ಯಯದಲ್ಲಿ "ಸಹೋದ್ಯಮ ಕೋರ್ಸ್ –155– Construction of Buildings" ಶೀರ್ಷಿಕೆಯಡಿಯಲ್ಲಿ ರೂ. 1.00/– ಕೋಟಿಗಳನ್ನು ಮಾತ್ರ ನಿಗಧಿಪಡಿಸಲಾಗಿದ್ದು, ಕಾರ್ಯಸೂಚಿಯಲ್ಲಿರುವ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಐದು ಕಾಮಗಾರಿಗಳಿಗೆ ಪಾವತಿ ಮಾಡಬೇಕಾದ ಮೊತ್ತ ರೂ. 5,60,35,850/– ಗಳನ್ನು 2018–19ನೇ ಸಾಲಿನ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿಕೊಂಡು ನಿಯಮಾನುಸಾರ ಬಾಕಿ ಮೊತ್ತವನ್ನು ಪಾವತಿಸಲು ಸಿಂಡಿಕೇಟ್ ಅನುಮೋದಿಸಿತು. |
| **2018/2.16** | ವಿಶ್ವವಿದ್ಯಾನಿಲಯದಲ್ಲಿ ಸೇವೆಯಲ್ಲಿರುವಾಗಲೇ ನಿಧನರಾದ ಉದ್ಯೋಗಿಯ ಕುಟುಂಬದ ಅವಲಂಬಿತರೊಬ್ಬರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | ಮೃತರಾದ ನೌಕರರ ಅವಲಂಬಿತರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ, ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ಮೃತರಾದ ದಿವಂಗತ ಶ್ರೀ ಎನ್ ಜಯರಾಮ, ನಿಲಯ ಸಹಾಯಕರು, ಸ್ನಾತಕೋತ್ತರ ಪುರುಷರ ವಿದ್ಯಾರ್ಥಿನಿಲಯ ಬ್ಲಾಕ್–2, ಮಾನಸಗಂಗೋತ್ರಿ, ಮೈಸೂರು ಅವರ ಮಗನಾದ ಶ್ರೀ ವಿನಯ್ ಜೆ., ರವರಿಗೆ ಅನುಕಂಪದ ಆಧಾರದ ಮೇಲೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯದಲ್ಲಿ ಅವರ ವಿದ್ಯಾರ್ಹತೆಯನುಸಾರ, ಖಾಲಿಯಿರುವ ನಿಲಯ ಸಹಾಯಕರ ಹುದ್ದೆಗೆ(4ನೇ ದರ್ಜೆ) ಅನುಕಂಪದ ಆಧಾರದ ಮೇಲೆ ನೇಮಕಮಾಡಿಕೊಳ್ಳಲು ಸಿಂಡಿಕೇಟ್ ಅನುಮೋದಿಸಿತು. |
| **2018/2.17** | Diploma and Post Graduate Diploma in Health & Safety Environment ಅಧ್ಯಯನ ಮಂಡಳಿಯನ್ನು ಪುನರ್‌ರಚಿಸಿರುವ ಬಗ್ಗೆ–ಅನುಸಮರ್ಥನೆಗಾಗಿ |
| **ತೀರ್ಮಾನ** | ಅಧ್ಯಯನ ಮಂಡಳಿಗಳ ವಾರ್ಷಿಕ ಸಭೆಗಳು ನಡೆಯುತ್ತಿದ್ದುದರಿಂದ ಹಾಗೂ ಶೈಕ್ಷಣಿಕ ಹಿತದೃಷ್ಟಿಯಿಂದ Diploma and Post Graduate Diploma in Health & Safety Environment ಅಧ್ಯಯನ ಮಂಡಳಿಯನ್ನು ಮೂರು ವರ್ಷಗಳ ಅವಧಿಗೆ ಪುನರ್ ರಚಿಸಿ ಅಧಿಸೂಚನೆ ಹೊರಡಿಸಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/2.18** | ದಿ: 27–10–2017ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ: 01ಕ್ಕೆ ವರದಿ |
| **ತೀರ್ಮಾನ** | ದಿನಾಂಕ 27.10.2017 ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ.01 ಕ್ಕೆ ಸಂಬಂಧಿಸಿದ ವರದಿಯನ್ನು ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಪಿಹೆಚ್.ಡಿ.ಗೆ ಅರ್ಜಿ ಸಲ್ಲಿಸುವಾಗ ಬೇರೊಂದು ಸಂಖ್ಯೆಯನ್ನು ನಮೂದಿಸಿ ಶಿಷ್ಯವೇತನ ಪಡೆಯುತ್ತಿರುವ ಅಭ್ಯರ್ಥಿಗಳ ತಾತ್ಕಾಲಿಕ ನೋಂದಣಿಯ ನೈಜ ಸಂಖ್ಯೆಯನ್ನು ವಿಶ್ವವಿದ್ಯಾನಿಲಯದ ವತಿಯಿಂದ ಸರಿಪಡಿಸಿ ಯು.ಜಿ.ಸಿ.ಗೆ ಕೋರಿ ಪತ್ರಬರೆಯುವುದು;<br>ಹಾಗೂ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಎಂ.ಫಿಲ್. ವ್ಯಾಸಂಗವಾಗಲಿ ಅಥವಾ ಪಿಹೆಚ್.ಡಿ ನೋಂದಣಿಯಾಗಲಿ ಇಲ್ಲದೆ, ಶಿಷ್ಯವೇತನಕ್ಕೆ ಆಯ್ಕೆಯಾಗಲು ತಪ್ಪು ಮಾಹಿತಿ ನೀಡಿ ಆಯ್ಕೆಯಾಗಿರುವ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ನೀಡುವುದರ ಬಗ್ಗೆ ಸ್ಪಷ್ಟೀಕರಣ ಕೋರಿ ಯುಜಿಸಿಗೆ ಪತ್ರ ಬರೆಯಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2018/2.19** | ಸಿಎಎಸ್ ಪದೋನ್ನತಿಯ ಬಗ್ಗೆ. |
| **ತೀರ್ಮಾನ** | ಸರ್ಕಾರವು 2007ನೇ ವರ್ಷದಲ್ಲಿ ನೇರನೇಮಕಾತಿ ಹೊಂದಿರುವ ಅಧ್ಯಾಪಕರುಗಳಿಗೆ ಖಾಯಂಪೂರ್ವ ಸೇವಾ ಅವಧಿಯನ್ನು ಘೋಷಣೆ ಮಾಡಲು ದಿನಾಂಕ 19-02-2015ರ ಪತ್ರದಲ್ಲಿ ಸರ್ಕಾರವು ತೆಗೆದುಕೊಂಡ ತೀರ್ಮಾನದಂತೆ ದಿನಾಂಕ 3-2-2018ರ ಪತ್ರದಲ್ಲಿ ಸದರಿ ಸಿಬ್ಬಂದಿಗಳಿಗೆ ಸಿಎಎಸ್ ಪದೋನ್ನತಿಯನ್ನು ಮಾನ್ಯ ಉಚ್ಚ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ ಎಂಬ ಷರತ್ತನ್ನು ವಿಧಿಸಿ, ಯುಜಿಸಿ ನಿಯಮಾನುಸಾರ ಹಾಗೂ ವಿಶ್ವವಿದ್ಯಾನಿಲಯದ ಪರಿನಿಯಮಾವಳಿಯಂತೆ ಸಿಎಎಸ್ ಪದೋನ್ನತಿಯನ್ನು ನೀಡಲು ಸರ್ಕಾರವು ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಗಮನಿಸಿತು. ಮತ್ತು ಇದರಂತೆ ಷರತ್ತು ವಿಧಿಸಿ ವಿ.ವಿ.ನಿಲಯ ಧನಸಹಾಯ ಆಯೋಗದ ರೆಗ್ಯೂಲೇಷನ್ಸ್ ಮತ್ತು ಸರ್ಕಾರದ ನಿರ್ದೇಶನದ ಅನ್ವಯ ರಚಿಸಲಾಗಿರುವ ಅಧಿನಿಯಮದಂತೆ ಅರ್ಹ ಅಧ್ಯಾಪಕರಿಗೆ ಸಿ.ಎ.ಎಸ್.ನಲ್ಲಿ ಪದೋನ್ನತಿ ನೀಡಲು;<br>ದಿನಾಂಕ 27-10-2017ರಂದು ಸಿಂಡಿಕೇಟ್‌ನಲ್ಲಿ ನ್ಯಾಯಾಲಯದ ಮೊರೆ ಹೋಗಿರುವವರನ್ನು ಹೊರತುಪಡಿಸಿ ಪದೋನ್ನತಿ ನೀಡುವಂತೆ ತೀರ್ಮಾನಿಸಿರುವ ನಿರ್ಣಯವನ್ನು ಹಿಂಪಡೆಯಲು;<br>ಹಾಗೂ ಸಿ.ಎ.ಎಸ್. ಅಡಿಯಲ್ಲಿ ಪದೋನ್ನತಿ ನೀಡದಿರುವ ಬಗ್ಗೆ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲು ಮಾಡಿರುವ ಅಧ್ಯಾಪಕರನ್ನೊಳಗೊಂಡಂತೆ ಅಧಿನಿಯಮಾನುಸಾರ ಎಲ್ಲಾ ಅರ್ಹ ಅಧ್ಯಾಪಕರಿಗೂ ಪದೋನ್ನತಿ ನೀಡಲು ಸಹ ಸಿಂಡಿಕೇಟ್ ತೀರ್ಮಾನಿಸಿತು.<br>ಆದರೆ, ಮಾನ್ಯ ಸಿಂಡಿಕೇಟ್ ಸದಸ್ಯರುಗಳಾದ, ಪ್ರೊ. ಡಿ. ನಂಜುಂಡಯ್ಯ, ಶ್ರೀ ಲಯನ್ ಹೆಚ್. ರಮೇಶ್ ಹಾಗೂ ಶ್ರೀ ಮಹಮದ್ ಅಬ್ದುಸ್ಸಲಾಂ ಇವರುಗಳು ಪದೋನ್ನತಿ ನೀಡುವ ಸಿಂಡಿಕೇಟ್ ತೀರ್ಮಾನಕ್ಕೆ ಅಂದಿನ ಸಭೆಯಲ್ಲಿ ಪತ್ರ ಮುಖೇನ ಅಸಮ್ಮತಿ ವ್ಯಕ್ತಪಡಿಸಿರುವುದನ್ನು ಸಹ ದಾಖಲಿಸಲು ತೀರ್ಮಾನಿಸಿತು. |
| **2018/2.20** | ಡಾ.ಸಿ.ಎಸ್.ಆನಂದ್ ಕುಮಾರ್, ಸಹ ಪ್ರಾಧ್ಯಾಪಕರು, ನ್ಯಾನೋ ಟೆಕ್ನಾಲಜಿ ವಿಭಾಗ, ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಟೆಕ್ನಾಲಜಿ, ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ ಇವರನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಾಡಿರುವ ನಿಯೋಜನೆಯನ್ನು ಮತ್ತೆ ಇನ್ನೂ ಒಂದು ವರ್ಷ ಅವಧಿಗೆ ಮುಂದುವರಿಸುವ ಬಗ್ಗೆ. |
| **ತೀರ್ಮಾನ** | ಡಾ.ಸಿ.ಎಸ್.ಆನಂದ್ ಕುಮಾರ್, ಸಹ ಪ್ರಾಧ್ಯಾಪಕರು, ನ್ಯಾನೋ ಟೆಕ್ನಾಲಜಿ ವಿಭಾಗ, ವಿಶ್ವೇಶ್ವರಯ್ಯ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಟೆಕ್ನಾಲಜಿ, ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ ಇವರನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ದಿನಾಂಕ 23-02-2016, 17-02-2017 ರಂದು 2 ಬಾರಿ ಸರ್ಕಾರ ನಿಯೋಜನೆ ಮಾಡಲಾಗಿತ್ತು. ಪ್ರಸ್ತುತ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು ಇವರು ಸದರಿರವರ ಮೈಸೂರು ವಿಶ್ವವಿದ್ಯಾನಿಲಯದಲ್ಲಿನ ನಿಯೋಜನಾ ಅವಧಿಯನ್ನು ಮತ್ತೊಂದು ವರ್ಷದವರೆಗೆ(2018-19) ವಿಸ್ತರಿಸಿ, ಅನುಮೋದನೆ ನೀಡಿರುವುದಕ್ಕೆ ಸಿಂಡಿಕೇಟ್ ಒಪ್ಪಿಗೆ ಸೂಚಿಸಿತು. |
| **2018/2.21** | ಶ್ರೀ ಚಂದ್ರಶೇಖರ.ಎಂ. ಪರಿಚಾರಕ ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಬಗ್ಗೆ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| **ತೀರ್ಮಾನ** | ಶ್ರೀ ಚಂದ್ರಶೇಖರ ಎಂ., ಪರಿಚಾರಕ, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ 24-12-2005 ರಿಂದ ಆಗಿಂದ್ದಾಗೆ ಕಛೇರಿ ಕೆಲಸಕ್ಕೆ ಅನಧಿಕೃತವಾಗಿ ಗೈರುಹಾಜರಾಗುತ್ತಿರುವುದರಿಂದ ದಿನಾಂಕ 25-03-2017ರ ಸಿಂಡಿಕೇಟ್ ನಿರ್ಣಯದಂತೆ ಸಿಸಿಎ ನಿಯಮಾನುಸಾರ ಶಿಸ್ತುಕ್ರಮ ಜರುಗಿಸುವ ಸಂಬಂಧ ಸಿದ್ದಪಡಿಸಿರುವ ದೋಷರೋಪಣಾ ಪಟ್ಟಿ ಹಾಗೂ ಆರೋಪಣಾ ಪಟ್ಟಿಯನ್ನು ಅನುಮೋದಿಸಿದ ಸಿಂಡಿಕೇಟ್‌ಸದರಿರವರ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರನ್ನು ವಿಚಾರಣಾಧಿಕಾರಿಯಾಗಿ ಸಹಾಯಕ ಕುಲಸಚಿವ(ಸಿಬ್ಬಂದಿ) ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಲು ಸಿಂಡಿಕೇಟ್ ತೀರ್ಮಾನಿಸಿತು. |

| | |
|---|---|
| **2018/2.22** | ಮೈಸೂರು ವಿಶ್ವವಿದ್ಯಾನಿಲಯದ ತಾತ್ಕಾಲಿಕ ಉದ್ಯೋಗಿಗಳಿಗೆ ನೀಡಿರುವ ವಸತಿಗೃಹಗಳ ಲೈಸೆನ್ಸ್ ಶುಲ್ಕದ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ತಾತ್ಕಾಲಿಕ ಉದ್ಯೋಗಿಗಳು ತಾವು ವಾಸ ಮಾಡುತ್ತಿರುವ ವಸತಿಗೃಹಗಳ ಬಾಡಿಗೆಯನ್ನು ಶೇ.10 ರಷ್ಟು ಹೆಚ್ಚಿಸಲಾಗಿದ್ದು, ಆರ್ಥಿಕವಾಗಿ ತುಂಬಾ ಕಷ್ಟವಾಗಿರುತ್ತದೆ ಹಾಗೂ ಪ್ರತಿ ವರ್ಷ ಬಾಡಿಗೆಯನ್ನು ಶೇ.10ರಷ್ಟು ಹೆಚ್ಚಿಸಿದ್ದಲ್ಲಿ ಜೀವನ ನಿರ್ವಹಣೆ ಮಾಡಲು ತುಂಬಾ ಕಷ್ಟವಾಗುವುದರಿಂದ ವಸತಿಗೃಹಗಳ ಬಾಡಿಗೆಯನ್ನು ಮೊದಲಿನಂತೆ ಪಾವತಿಸಲು ಅನುವು ಮಾಡಿಕೊಡಬೇಕೆಂಬ ಮನವಿಯನ್ನು ಪರಿಶೀಲಿಸಿದ ಸಭೆಯು, ಪ್ರತಿ ವರ್ಷ ಬಾಡಿಗೆಯನ್ನು ಶೇ.10 ರಷ್ಟನ್ನು ಹೆಚ್ಚಿಸುವ ಬದಲು, ತಾತ್ಕಾಲಿಕ ಸಿಬ್ಬಂದಿಗಳಿಗೆ ವೇತನವನ್ನು ಹೆಚ್ಚಿಸುವ ವರ್ಷದ ಅವಧಿಯಲ್ಲಿ ಶೇ.10ರಷ್ಟರ ಬದಲು ಶೇ.5ರಷ್ಟನ್ನು ಮಾತ್ರ ಹೆಚ್ಚಿಸಿ,License Feeಯನ್ನು ನಿಗಧಿಪಡಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/2.23** | ಗ್ರಂಥಾಲಯ ಸಹಾಯಕರುಗಳಿಗೆ ಸಹಾಯಕ ಗ್ರಂಥಪಾಲಕರಾಗಿ ಪದೋನ್ನತಿ ನೀಡಿರುವುದನ್ನು ಸರ್ಕಾರವು ಅಸಿಂದು ಎಂದು ಪರಿಗಣಿಸಿ ತೆಗೆದುಕೊಂಡ ಕ್ರಮದ ಬಗ್ಗೆ ವರದಿಯನ್ನು ನೀಡುವಂತೆ ತಿಳಿಸಿರುವ ಬಗ್ಗೆ. |
| **ತೀರ್ಮಾನ** | 1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು ಇವರು ತಮ್ಮ ಪತ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಗ್ರಂಥಾಲಯ ಸಹಾಯಕ ಹುದ್ದೆಯಿಂದ ಸಹಾಯಕ ಗ್ರಂಥಪಾಲಕ ಹುದ್ದೆಗೆ ಪದೋನ್ನತಿ ನೀಡಿರುವುದು ಅಸಿಂಧು ಹಾಗೂ ಅವುಗಳನ್ನು ಕೂಡಲೇ ಹಿಂಪಡೆದು, ತೆಗೆದುಕೊಂಡ ಕ್ರಮದ ಬಗ್ಗೆ ಒಂದು ವಾರದೊಳಗಾಗಿ ವರದಿಯನ್ನು ನೀಡುವಂತೆ ತಿಳಿಸಿರುವುದರಿಂದ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹನ್ನೆರಡು ಸಹಾಯಕ ಗ್ರಂಥಪಾಲರ ಪೈಕಿ ಡಾ:ವೈ.ಎಲ್.ಸೋಮಶೇಖರ್, ಇವರು 15.10.1996 ರಲ್ಲಿ SLETಪದವಿಯನ್ನು ಪಡೆದಿದ್ದು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆಯ ಅನ್ವಯ, ರಚಿಸಿದ್ದ ನೇಮಕಾತಿ ಮಂಡಳಿಯ ಮೂಲಕ ಸಹಾಯಕ ಗ್ರಂಥಪಾಲಕ ಹುದ್ದೆಗೆ 25.04.1998 ರಲ್ಲಿನೇರ ನೇಮಕಾತಿ ಮೂಲಕ ನೇಮಕಗೊಂಡಿರುವುದನ್ನು ಗಮನಿಸಿದ ಸಿಂಡಿಕೇಟ್ ಯುಜಿಸಿ ನಿಗದಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರುವ ಹಿನ್ನೆಲೆಯಲ್ಲಿ ಡಾ:ವೈ.ಎಲ್.ಸೋಮಶೇಖರ್‌ರವರನ್ನು ಹೊರತುಪಡಿಸಿ, ಸರ್ಕಾರದ ನಿರ್ದೇಶನದಂತೆ ಉಳಿದ **ಈ ಕೆಳಕಂಡ 11 ಮಂದಿ** ಸಹಾಯಕ ಗ್ರಂಥಪಾಲಕರಿಗೆ ನೀಡಲಾಗಿರುವ ಪದೋನ್ನತಿಯನ್ನು ಹಿಂಪಡೆದು ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸಿಂಡಿಕೇಟ್ ಅನುಮೋದಿಸಿತು. |

| ಕ್ರ. ಸಂ | ಉದ್ಯೋಗಿಗಳ ಹೆಸರು | ಸಹಾಯಕ ಗ್ರಂಥಪಾಲಕರಾಗಿ ಪದೋನ್ನತಿ ನೀಡಿದ ದಿನಾಂಕ | SLET or Ph.D ಪದವಿ ಪಡೆದ ದಿನಾಂಕ |
|---|---|---|---|
| 1 | ಡಾ. ಗಿಡ್ಡಯ್ಯ ಡಿ | 20.04.2005 | Ph.D 24.7.2015 |
| 2 | ಮರಿಸ್ವಾಮಿ ಸಿ | 16.03.2009 | Ph.D/SLET ವಿದ್ಯಾರ್ಹತೆಯಿರುವುದಿಲ್ಲ |
| 3 | ನಾಗಸುಂದರ | 16.03.2009 | Ph.D/SLET ವಿದ್ಯಾರ್ಹತೆಯಿರುವುದಿಲ್ಲ |
| 4 | ಜಯಶ್ರೀ ಜಗದೀಶ | 25.05.2010 | Ph.D/SLET ವಿದ್ಯಾರ್ಹತೆಯಿರುವುದಿಲ್ಲ |
| 5 | ಡಾ. ವೆಂಟೇಶ | 15.06.2010 | Ph.D 05.09.2017 |
| 6 | ಡಾ. ರಾಘವೇಂದ್ರ | 10.12.2012 | Ph.D 24.7.2014 |
| 7 | ಬಿ.ಎಸ್.ಜಗದೀಶ | 10.12.2012 | Ph.D/SLET ವಿದ್ಯಾರ್ಹತೆಯಿರುವುದಿಲ್ಲ |
| 8 | ಬಸಪ್ಪ ಬಿ | 10.12.2012 | Ph.D/SLET ವಿದ್ಯಾರ್ಹತೆಯಿರುವುದಿಲ್ಲ |
| 9 | ಮಂಜುಳ ಕೆ | 10.12.2012 | Ph.D/SLET ವಿದ್ಯಾರ್ಹತೆಯಿರುವುದಿಲ್ಲ |
| 10 | ಬಿ.ಜಿ.ಮಂಜುಳ | 11.12.2012 | Ph.D/SLET ವಿದ್ಯಾರ್ಹತೆಯಿರುವುದಿಲ್ಲ |
| 11 | ರಮೇಶ ಎ.ಎನ್. | 19.12.2012 | Ph.D/SLET ವಿದ್ಯಾರ್ಹತೆಯಿರುವುದಿಲ್ಲ |

| | |
|---|---|
| **2018/2.24** | ಮರುಮೌಲ್ಯಮಾಪನ/ಚಾಲೆಂಜ್ ವ್ಯಾಲುಯೇಷನ್ ಮಾಡುವ ಮೌಲ್ಯಮಾಪಕರ ಸಂಭಾವನೆಯ ಬಗ್ಗೆ. |
| **ತೀರ್ಮಾನ** | ದಿನಾಂಕ 18–01–2018 ರ ಸಿಂಡಿಕೇಟ್ ನಿರ್ಣಯದನ್ವಯ, ಸ್ನಾತಕ/ಸ್ನಾತಕೋತ್ತರ ಪದವಿ/ಡಿಪ್ಲೊಮ/ಪಿಜಿ ಡಿಪ್ಲೊಮ/ಸರ್ಟಿಫಿಕೇಟ್ ಕೋರ್ಸುಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡುವ ಬಾಹ್ಯ ಹಾಗೂ ಆಂತರಿಕ ಅಧ್ಯಾಪಕರುಗಳಿಗೆ ದಿನಭತ್ಯೆ ಹಾಗೂ ಸ್ಥಳೀಯ ಭತ್ಯೆಗಳನ್ನು ಪಾವತಿಸಲು ನಿರ್ಣಯಿಸಿರುವಂತೆ, ಮರುಮೌಲ್ಯಮಾಪನ/ಚಾಲೆಂಜ್ ವ್ಯಾಲ್ಯುಯೇಷನ್ ಕಾರ್ಯನಿರ್ವಹಿಸುವ ಯುಜಿಸಿ ವೇತನದಾರರಿಗೂ ಈ ಕೆಳಕಂಡಂತೆ ದಿನಭತ್ಯೆ ಹಾಗೂ ಸ್ಥಳೀಯ ಭತ್ಯೆ ಅಥವಾ/ಹಾಗೂನಿಯಮಾನುಸಾರಪ್ರಯಾಣಭತ್ಯೆಯನ್ನು ನೀಡಲುಸಿಂಡಿಕೇಟ್ ತೀರ್ಮಾನಿಸಿತು. |

| ಬಾಹ್ಯ (ಹೊರಗಿನ) ಮೌಲ್ಯಮಾಪಕರುಗಳಿಗೆ (ದಿನಕ್ಕೆ) | ಆಂತರಿಕ (ಸ್ಥಳೀಯ) ಮೌಲ್ಯಮಾಪಕರುಗಳಿಗೆ |
|---|---|
| **ರೂ. 800/– (ದಿನಭತ್ಯೆ)** | **ರೂ. 400/– (ಸ್ಥಳೀಯ ಭತ್ಯೆ)** |

| | |
|---|---|
| **2018/2.25** | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ (ಎಂ.ಪಿ.ಎಲ್.ಇ.ಸಿ) ವರದಿ ಹಾಗೂ ಶಿಫಾರಸುಗಳು. |
| **ತೀರ್ಮಾನ** | ನವೆಂಬರ್/ಡಿಸೆಂಬರ್ ರಲ್ಲಿ ನಡೆದ ಬಿ.ಎ/ಬಿ.ಕಾಂ/ಬಿ.ಬಿ.ಎಂ/ಬಿ.ಎಸ್ಸಿ/ಬಿ.ಸಿ.ಎ/ಬಿ.ಬಿ.ಎ ಪದವಿಗಳ ಮೊದಲನೆ/ಮೂರನೇ/ಐದನೇ ಸೆಮಿಸ್ಟರ್ ಪರೀಕ್ಷೆಗಳಲ್ಲಿ ಹಾಗೂ ಸ್ನಾತಕೋತ್ತರ ಎಂ.ಎಸ್ಸಿ ಪದವಿಯ ಮೂರನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಕಂಡು ಬಂದ ಲೋಪದೋಷಗಳ ಬಗ್ಗೆ ಕೊಠಡಿ ಮೇಲ್ವಿಚಾರಕರು/ಜಾಗೃತ ದಳದವರು/ ವಿಶ್ವವಿದ್ಯಾನಿಲಯದ ವಿಶೇಷ ಜಾಗೃತದಳದವರು ವರದಿ ನೀಡಿರುವುದನ್ನು ನಿಯಮಾನುಸಾರ ಎಂ.ಪಿ.ಎಲ್.ಇ ಸಮಿತಿಯವರ ಮುಂದೆ ಮಂಡಿಸಲಾಗಿ, ಎಲ್ಲಾ ಪ್ರಕರಣಗಳನ್ನು ಕೂಲಂಕಷವಾಗಿ ಪರಿಶೀಲಿಸಿ/ವಿಚಾರಣೆ ನಡೆಸಿ, ಸಲ್ಲಿಸಿರುವ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/2.26** | ಅರ್ಥಶಾಸ್ತ್ರ ಮತ್ತು ಸಹಕಾರ, ಹಿಂದಿ, ಸಂಸ್ಕೃತ, ಸಮಾಜಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗಗಳಿಗೆ ಅಧ್ಯಕ್ಷರನ್ನು ನೇಮಿಸುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ **ಎರಡು ವರ್ಷಗಳವರೆಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ ಆದೇಶದವರೆಗೆ** ಅಧ್ಯಕ್ಷರ ನೇಮಕಾತಿಗೆ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮಾರ್ಗಸೂಚಿಯನುಸಾರ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವವರ ನಂತರ ಅರ್ಹರಾಗಿರುವ ಹಿರಿಯ ಪ್ರಾಧ್ಯಾಪಕರುಗಳನ್ನು ಈ ಕೆಳಗಿನ ಅಧ್ಯಯನ ವಿಭಾಗಗಳಿಗೆ ಅಧ್ಯಕ್ಷರನ್ನಾಗಿ ನೇಮಿಸಲು ಸಿಂಡಿಕೇಟ್ ತೀರ್ಮಾನಿಸಿತು. |

| ಕ್ರಮ ಸಂಖ್ಯೆ | ಅಧ್ಯಯನ ವಿಭಾಗ | ಅಧ್ಯಕ್ಷರಾಗಿ ನೇಮಕವಾದವರು | ಜಾರಿಗೆ ಬರುವ ದಿನಾಂಕ |
|---|---|---|---|
| 1. | ಅರ್ಥಶಾಸ್ತ್ರ ಮತ್ತು ಸಹಕಾರ | ಪ್ರೊ. ಬಿ.ಕೆ.ತುಳಸಿಮಾಲ | ಆದೇಶದ ದಿನಾಂಕದಿಂದ |
| 2. | ಹಿಂದಿ | ಪ್ರೊ. ಪ್ರತಿಭಾ ಆರ್ ಮುದಲಿಯಾರ್ | ಆದೇಶದ ದಿನಾಂಕದಿಂದ |
| 3. | ಸಂಸ್ಕೃತ | ಡಾ. ಕೆ.ನಾರಾಯಣ ಭಟ್ಟ **(ಇವರನ್ನು ಹೊರತುಪಡಿಸಿ, ವಿಭಾಗದಲ್ಲಿ ಬೇರೆ ಯಾರೂ ಪ್ರಾಧ್ಯಾಪಕರು/ಸಹ ಪ್ರಾಧ್ಯಾಪಕರು ಇರುವುದಿಲ್ಲ ಹಾಗೂ ಡಾ.ಅನಂತ ನಾಗೇಂದ್ರ ಭಟ್ ರವರು ದಿನಾಂಕ 13.03.2018 ರಂದು ಸೇವೆಯಿಂದ ನಿವೃತ್ತರಾಗುತ್ತಿರುವರು)** | 07–03–2018ರಿಂದ ಮತ್ತೊಂದು ಅವಧಿಗೆ ಮುಂದುವರೆಸಲು |
| 4. | ಸಮಾಜಕಾರ್ಯ | ಪ್ರೊ. ವೈ.ಎಸ್.ಸಿದ್ದೇಗೌಡ | ಆದೇಶದ ದಿನಾಂಕದಿಂದ |
| 5. | ಸಸ್ಯಶಾಸ್ತ್ರ | ಪ್ರೊ. ಎಸ್.ಲೀಲಾವತಿ | 18–03–2018 |
| 6. | ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ | ಪ್ರೊ. ಬಿ.ಪಿ.ಮಹೇಶ ಚಂದ್ರ ಗುರು | 31–03–2018ರ ಅಪರಾಹ್ನದಿಂದ ಜಾರಿಗೆ ಬಂದಂತೆ ಕಾರ್ಯಭಾರ ವಹಿಸಿಕೊಳ್ಳುವುದು. |

| | |
|---|---|
| **2018/2.27** | ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕವಾಗಿ ಕೆಲಸ ನಿರ್ವಹಿಸುತ್ತಿರುವ ಹೌಸ್ ಕೀಪಿಂಗ್ ನೌಕರರುಗಳ ಬಗೆಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕವಾಗಿ ಕೆಲಸ ನಿರ್ವಹಿಸುತ್ತಿರುವ 50 ಜನ ಸಫಾಯಿ ಕರ್ಮಚಾರಿಗಳನ್ನೊಳಗೊಂಡಂತೆ ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಸ್ವಚ್ಚತಾ ಸಿಬ್ಬಂದಿ (ಹೌಸ್‌ಕೀಪಿಂಗ್)ಯನ್ನು ಈ ಹಿಂದೆ ಹೊರಗುತ್ತಿಗೆ ಪದ್ಧತಿಯಲ್ಲಿ ನೇಮಕ ಮಾಡಿಕೊಂಡಿದ್ದಂತೆ ಟೆಂಡರ್ ಆಹ್ವಾನಿಸಿ ಹೊರಗುತ್ತಿಗೆ ಮೂಲಕ ನಿಯಮಾನುಸಾರ ನೇಮಿಸಿಕೊಳ್ಳಲು ತೀರ್ಮಾನಿಸಿ, ಈ ನಿರ್ಣಯವನ್ನು ಗೌರವಾನ್ವಿತ ಸಫಾಯಿ ಕರ್ಮಚಾರಿ ಆಯೋಗಕ್ಕೆ ಸಲ್ಲಿಸುವಂತೆ ಸಹ ಸಿಂಡಿಕೇಟ್ ತೀರ್ಮಾನಿಸಿತು. |
| **2018/2.28** | ಡಾ. ಮಾನೆ, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ವಿರುದ್ಧ ದಾಖಲಾಗಿದ್ದ ಲೈಂಗಿಕ ಕಿರುಕುಳದ ದೂರಿನ ಮೇಲೆ ವಿಶ್ವವಿದ್ಯಾನಿಲಯದ ಆಂತರಿಕ ದೂರು ಸಮಿತಿಯು ನೀಡಿದ ವರದಿಯ ಬಗ್ಗೆ. |
| **ತೀರ್ಮಾನ** | ದಿನಾಂಕ 21–11–2016ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಪ್ರೊ. ಮಾನೆ, ಅಧ್ಯಕ್ಷರು ಹಾಗೂ ಪ್ರಾಧ್ಯಾಪಕರು, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ವಿರುದ್ದSuo-moto ಲೈಂಗಿಕ ದೌರ್ಜನ್ಯ ದೂರನ್ನು ಕರ್ನಾಟಕ ರಾಜ್ಯ ಮಹಿಳಾ ಆಯೋಗವು ಸಲ್ಲಿಸಿದ ಮೇರೆಗೆ ವಿಶ್ವವಿದ್ಯಾನಿಲಯ ದೂರು ಸಮಿತಿಯು ವಿಚಾರಣೆಯನ್ನು ನಡೆಸಿ ಸಲ್ಲಿಸಿದ್ದ ವರದಿಯನ್ನಾಧರಿಸಿ ತೆಗೆದುಕೊಂಡ ತೀರ್ಮಾನವನ್ನು ಮತ್ತೆ ಸಿಂಡಿಕೇಟ್‌ನಲ್ಲಿ ಚರ್ಚಿಸುವ ಅವಶ್ಯಕತೆಯಿರುವುದಿಲ್ಲವಾದ್ದರಿಂದ ಅದೇ ತೀರ್ಮಾನವನ್ನು ಸರ್ಕಾರಕ್ಕೆ ಕಳುಹಿಸಲು ಸಿಂಡಿಕೇಟ್ ತೀರ್ಮಾನಿಸಿತು. ಹಾಗೂ<br><br>ಡಾ. ಮಾನೆ, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ವಿದ್ಯಾರ್ಥಿನಿಯರು, ಸಂಶೋಧಕರುಗಳು ಹಾಗೂ ಮಹಿಳಾ ಅಧ್ಯಾಪಕರುಗಳಿಗೆ ಮಾನಸಿಕ, ದೈಹಿಕ ಹಾಗೂ ಲೈಂಗಿಕವಾಗಿ ಕಿರುಕುಳ ನೀಡುತ್ತಿರುವ ಬಗ್ಗೆ ಮೌಖಿಕ/ಅನಾಮಧೇಯ/ಲಿಖಿತಪುನಃ ದೂರುಗಳುಬಂದಿರುವ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ವಿಶ್ವವಿದ್ಯಾನಿಲಯದ ದೂರು ಸಮಿತಿಗೆ ತನಿಖೆಗಾಗಿ ಕಳುಹಿಸಲು ನಿರ್ಣಯಿಸಿ, ಅದುವರೆಗೆ ನಿಷ್ಪಕ್ಷಪಾತವಾದ ತನಿಖೆಗೆ ಸಹಕರಿಸಬೇಕೆಂಬ ಉದ್ದೇಶದಿಂದ ಈ ಕೆಳಕಂಡಂತೆ ತೀರ್ಮಾನಗಳನ್ನು ಸಿಂಡಿಕೇಟ್ ಕೈಗೊಂಡಿತು.<br><br>1. ಡಾ. ಮಾನೆ, ಪ್ರಾಧ್ಯಾಪಕರು ಇವರನ್ನು ವಿಭಾಗದ ಅಧ್ಯಕ್ಷ/ಮಾರ್ಗದರ್ಶಕರು/ ಅಧ್ಯಯನ ಮಂಡಳಿಯ ಸ್ಥಾನದಿಂದ ತೆಗೆದುಹಾಕುವುದು;<br>2. ಡಾ.ಮಾನೆ, ಇವರ ಬಳಿ ಮಾರ್ಗದರ್ಶನ ಪಡೆಯುತ್ತಿರುವ ಸಂಶೋಧನಾ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ ಬದಲಿ ಮಾರ್ಗದರ್ಶಕರನ್ನು ನೇಮಕ ಮಾಡುವುದು;<br>3. ಡಾ.ಮಾನೆ ಇವರ ವಿರುದ್ದ ಬಾಕಿ ಇರುವ ಎಲ್ಲಾ ಪ್ರಕರಣಗಳ ವಿಚಾರಣೆಗಳನ್ನು ಪೂರ್ಣಗೊಳಿಸುವ ಬಗ್ಗೆ ಕ್ರಮವಹಿಸುವುದು.<br>4. ಡಾ.ಮಾನೆ, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಸಾರ್ವಜನಿಕ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಅಧ್ಯಯನವಿಭಾಗದ ಅಧ್ಯಕ್ಷರಾಗಿ ಕಲಾ ನಿಕಾಯದ ಡೀನರನ್ನು ಮತ್ತು ಅಧ್ಯಯನ ಮಂಡಳಿಯ ಅಧ್ಯಕ್ಷ ಸ್ಥಾನದಿಂದ ತೆರವುಗೊಳಿಸಿದ ಹುದ್ದೆಗೆ ಅರ್ಹ ಹಿರಿಯ ಪ್ರಾಧ್ಯಾಪಕರನ್ನು ನೇಮಿಸುವುದು. |
| **2018/2.29** | ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿಗೆ ಹೊಸದಾಗಿ ಸ್ವಾಯತ್ತತಾ ಸ್ಥಾನಮಾನ ನೀಡುವ ಬಗೆಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಸಂಯೋಜಿತ ಮೈಸೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿಗೆ ಹೊಸದಾಗಿ 2018–19ನೇ ಶೈಕ್ಷಣಿಕ ಸಾಲಿನಿಂದ ಸ್ವಾಯತ್ತತಾ ಸ್ಥಾನಮಾನ ನೀಡುವುದನ್ನು ಸಿಂಡಿಕೇಟ್ ಅನುಮೋದಿಸಿತು. |

| | |
|---|---|
| **2018/2.30** | 2017–18ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಮರ್ಶನಾ ಸಮಿತಿಯು ಭೇಟಿ ನೀಡಿ ಪರೀಶಿಲಿಸಿ ಸಲ್ಲಿಸಿದ ವರದಿಯ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಬಗ್ಗೆ. |
| **ತೀರ್ಮಾನ** | 2017–18ನೇ ಶೈಕ್ಷಣಿಕ ಸಾಲಿನ ಮೈಸೂರಿನ ಬನ್ನಿಮಂಟಪದಲ್ಲಿರುವ ಸೆಂಟ್ ಫಿಲೋಮಿನಾಸ್ ಸ್ವಾಯತ್ತತಾ ಕಾಲೇಜಿಗೆ ಪರಮರ್ಶನಾ ಸಮಿತಿಯು ಭೇಟಿ ನೀಡಿ ಪರಿಶೀಲಿಸಿ ಸಲ್ಲಿಸಿದ ಷರತ್ತುಬದ್ಧ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/2.31** | ಶ್ರೀ ಗಣೇಶ ದ್ವಿತೀಯ ದರ್ಜೆ ಗುಮಾಸ್ತರು, ವಿದ್ಯಾರ್ಥಿ ಕ್ಷೇಮಪಾಲನಾ ಕಛೇರಿ, ಮಾನಸಗಂಗೋತ್ರಿ, ಮೈಸೂರು ಇವರ ಅನಧಿಕೃತ ಗೈರುಹಾಜರಿಯ ಹಿನ್ನಲೆಯಲ್ಲಿ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| **ತೀರ್ಮಾನ** | ಶ್ರೀಗಣೇಶ ದ್ವಿತೀಯ ದರ್ಜೆ ಗುಮಾಸ್ತರು, ವಿದ್ಯಾರ್ಥಿ ಕ್ಷೇಮಪಾಲನಾ ಕಛೇರಿ, ಮಾನಸಗಂಗೋತ್ರಿ, ಮೈಸೂರು ಇವರು 03–06–2015 ರಿಂದ ಇಲ್ಲಿಯವರೆಗೂ ಪೂರ್ವಾನುಮತಿ ಪಡೆಯದೇ ಅನಧಿಕೃತ ಗೈರು ಹಾಜರಾಗಿದ್ದು ಸಿಸಿಎ ನಿಯಮಾನುಸಾರ ಶಿಸ್ತುಕ್ರಮ ಜರುಗಿಸುವ ಸಂಬಂಧ ಸಿದ್ದಪಡಿಸಿರುವ ದೋಷರೋಪಣಾ ಪಟ್ಟಿ ಹಾಗೂ ಆರೋಪಣಾ ಪಟ್ಟಿಯನ್ನು ಪರಿಶೀಲಿಸಿ ಅನುಮೋದಿಸಿತು ಮತ್ತು ಸಿಂಡಿಕೇಟ್ ಸದರಿರವರ ಮೇಲೆ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರನ್ನು ವಿಚಾರಣಾಧಿಕಾರಿಯಾಗಿ ಸಹಾಯಕ ಕುಲಸಚಿವ(ಸಿಬ್ಬಂದಿ) ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/2.32** | ಡಾ.ಸಿ.ಉಷಾ ರಾವ್, ಸಮಾಜಕಾರ್ಯ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ದಾನಿಗಳು ನಿಬಂಧನೆಯಲ್ಲಿ ಸೂಚಿಸಿರುವಂತೆ MA in Social Work ಸ್ನಾತಕೋತ್ತರ ಪದವಿಯಲ್ಲಿ ಅತಿಹೆಚ್ಚು ಅಂಕ/ಉತ್ತಮ ಗ್ರೇಡ್ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾಗುವ **ಮಹಿಳಾ ವಿದ್ಯಾರ್ಥಿಗೆ** ಚಿನ್ನದ ಪದಕ ನೀಡುವ ಸಲುವಾಗಿ **"ಡಾ.ಸಿ.ಉಷಾ ರಾವ್, ಸಮಾಜಕಾರ್ಯ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಚಿನ್ನದ ಪದಕ" ದತ್ತಿ ಸ್ಥಾಪಿಸಲು** ಕೋರಿರುವುದನ್ನು ಅನುಮೋದಿಸಿತು ಮತ್ತು ಪ್ರಸಕ್ತ ಸಾಲಿನಿಂದಲೇ ಜಾರಿಗೆ ತರಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/2.33** | ಪ್ರೊ. ಹೆಚ್.ಎಸ್. ಪ್ರಕಾಶ್ ಚಿನ್ನದ ಪದಕ ದತ್ತಿ ಸ್ಥಾಪನೆ ಮಾಡುವ ಬಗ್ಗೆ |
| **ತೀರ್ಮಾನ** | ದಾನಿಗಳು ನಿಬಂಧನೆಯಲ್ಲಿ ಸೂಚಿಸಿರುವಂತೆ Msc in Biotechnology ಸ್ನಾತಕೋತ್ತರ ಪದವಿಯಲ್ಲಿ ಅತಿಹೆಚ್ಚು ಅಂಕ/ಉತ್ತಮ ಗ್ರೇಡ್ ಪಡೆದು ಪ್ರಥಮ ಬಾರಿಗೆ ತೇರ್ಗಡೆಯಾಗುವ ವಿದ್ಯಾರ್ಥಿಗೆಚಿನ್ನದ ಪದಕ ನೀಡುವ ಸಲುವಾಗಿ **"ಪ್ರೊ.ಹೆಚ್.ಎಸ್.ಪ್ರಕಾಶ್ ಚಿನ್ನದ ಪದಕ" ದತ್ತಿ ಸ್ಥಾಪಿಸಲು** ಕೋರಿರುವುದನ್ನು ಅನುಮೋದಿಸಿತು ಮತ್ತು ಪ್ರಸಕ್ತ ಸಾಲಿನಿಂದಲೇ ಜಾರಿಗೆ ತರಲು ಸಿಂಡಿಕೇಟ್ ತೀರ್ಮಾನಿಸಿತು. |

| 2018/2.34 | ವಿಶ್ವವಿದ್ಯಾನಿಲಯದ ಈಜುಕೊಳದ ಪ್ರವೇಶ ದರಗಳನ್ನು ಪರಿಷ್ಕರಿಸುವ ಬಗ್ಗೆ |
|---|---|
| **ತೀರ್ಮಾನ** | ದಿ.27–02–2018 ರಂದು ಜರುಗಿದ ವಿಶ್ವವಿದ್ಯಾನಿಲಯದ ಎರಡನೇ ಕ್ರೀಡಾ ಸಮಿತಿಯ ತೀರ್ಮಾನದಂತೆ, ಈಜುಕೊಳದ ಪ್ರವೇಶ ದರಗಳನ್ನು ಪರಿಶೀಲಿಸಿದ ಸಭೆಯು ಕೆಲವು ದರಗಳನ್ನು ಮಾರ್ಪಾಡು ಮಾಡಿ ನಿಗದಿಪಡಿಸಿ, ಈ ಕೆಳಕಂಡಂತೆ ಪರಿಷ್ಕೃತ ದರಪಟ್ಟಿಯನ್ನು ಸಿಂಡಿಕೇಟ್ ಅನುಮೋದಿಸಿತು. |

**1. ಪ್ರವೇಶ ದರ (ಪ್ರತಿ ಬ್ಯಾಚಿಗೆ ಒಬ್ಬರಿಗೆ)**

| **ಕ್ರ. ಸಂ.** | **ವಿವರ** | **ಹಾಲಿ ದರ (ರೂ.)** | **ಸೂಚಿತ ಹೊಸ ದರ (ರೂ.)** |
|---|---|---|---|
| **01** | **02** | **03** | **04** |
| 1 | ಸಾರ್ವಜನಿಕರಿಗೆ (ವಯಸ್ಕರಿಗೆ) | 40–00 | **60–00** |
| 2 | 12 ವರ್ಷ ಒಳಪಟ್ಟ ಸಾರ್ವಜನಿಕ ಮಕ್ಕಳಿಗೆ | 35–00 | **40–00** |
| 3 | ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ | 30–00 | **30–00** |

2. **ಮಾಸಿಕ ಶುಲ್ಕ ಒಬ್ಬರಿಗೆ ಪ್ರತಿ ಬ್ಯಾಚಿಗೆ**

| | | | |
|---|---|---|---|
| 1 | ಸಾರ್ವಜನಿಕರಿಗೆ (ವಯಸ್ಕರಿಗೆ) | 700–00 | **1,200–00** |
| 2 | 12 ವರ್ಷ ಒಳಪಟ್ಟ ಸಾರ್ವಜನಿಕ ಮಕ್ಕಳಿಗೆ | 575–00 | **600–00** |
| 3 | ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ | 450–00 | **500–00** |
| 4 | ವಿಶ್ವವಿದ್ಯಾನಿಲಯದ ಉದ್ಯೋಗಿಗಳಿಗೆ/ ಮಕ್ಕಳಿಗೆ (ಇಬ್ಬರಿಗೆ ಸೀಮಿತ) ಕುಲಪತಿ/ ಕುಲಸಚಿವರು/ ನಿರ್ದೇಶಕರು ಸೂಚಿಸುವವರಿಗೆ) | 250–00 | **300–00** |

**3. 06 ತಿಂಗಳ ಒಂದು ಬ್ಯಾಚಿಗೆ ಒಬ್ಬರಿಗೆ**

| | | | |
|---|---|---|---|
| 1 | ಸಾರ್ವಜನಿಕರಿಗೆ (ವಯಸ್ಕರಿಗೆ) | 3,500–00 | **5,500–00** |

**4. 12 ತಿಂಗಳ ಒಂದು ಬ್ಯಾಚಿಗೆ ಒಬ್ಬರಿಗೆ**

| | | | |
|---|---|---|---|
| 1 | ಸಾರ್ವಜನಿಕರಿಗೆ (ವಯಸ್ಕರಿಗೆ) | 6,750–00 | **10,000–00** |

**5. ವಾರ್ಷಿಕ ಶುಲ್ಕ ಈಜು ಸ್ಪರ್ಧೆಯಲ್ಲಿ ಭಾಗವಹಿಸುವವರಿಗೆ (12 ತಿಂಗಳಿಗೆ)**

| | | | |
|---|---|---|---|
| 1 | ಈಜು ಸ್ಪರ್ಧೆಯಲ್ಲಿ ಭಾಗವಹಿಸಲು ಆಯ್ಕೆಯಾಗಿರುವ ಒಬ್ಬರಿಗೆ ಒಂದು ವರ್ಷಕ್ಕೆ (ಈಜು ತರಬೇತುದಾರರು/ಈಜು ಶಿಕ್ಷಕರು ದೃಢೀಕರಿಸಿದವರಿಗೆ ಈಜು ಸ್ಪರ್ಧೆಗಳ ಉತ್ತೇಜನ ದೃಷ್ಟಿಯಿಂದ) | 3,000+00 | **4,000–00** |
| 2 | ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ಇವರು ಪ್ರತಿ ವರ್ಷ ಹಾಲಿ ದರದ ಮೇಲೆ ಶೇ.10ರಷ್ಟನ್ನು ಹೆಚ್ಚಿಸಿ ಹೊಸ ದರವನ್ನು ನಿಗದಿಪಡಿಸುವುದು. | | |

**6. ಈಜು ಸ್ಪರ್ಧೆಗಳಿಗೆ (ಒಂದು ದಿನಕ್ಕೆ)**

| | | | |
|---|---|---|---|
| 1 | ವಿಶ್ವವಿದ್ಯಾನಿಲಯವೇ ಈಜು ಸ್ಪರ್ಧೆಯನ್ನು ಏರ್ಪಡಿಸಿದರೆ | ಉಚಿತ | **–** |
| 2 | ಸರ್ಕಾರದ ಇಲಾಖೆಗಳು / ಸರ್ಕಾರರ ಸಂಘ/ ಮೈಸೂರ ಜಿಲ್ಲಾ ಈಜು ಸಂಸ್ಥೆಯವರು ಈಜು ಸ್ಪರ್ಧೆಯನ್ನು ಏರ್ಪಡಿಸಿದರೆ | 2,500–00 | **4,000–00** |

| | | | |
|---|---|---|---|
| 3 | ಖಾಸಗಿಯವರು ಈಜು ಸ್ಪರ್ಧೆಯನ್ನು ಏರ್ಪಡಿಸಿದರೆ | 3,500–00 | **7,000–00** |
| 4 | ಚಲನಚಿತ್ರದವರು ಈಜುಕೊಳವನ್ನು ಚಿತ್ರೀಕರಣಕ್ಕೆ ಕೋರಿದರೆ | 35,000–00 | **75,000–00** |

**7. ವಿಶೇಷ ಈಜು ತರಬೇತಿ ಶಿಬಿರಕ್ಕೆ ಒಬ್ಬರಿಗೆ ಒಂದು ಬ್ಯಾಚಿಗೆ (21 ದಿನಗಳ ಅವಧಿಗೆ)**

| | | | |
|---|---|---|---|
| 1 | ವಿಶೇಷ ಈಜು ತರಬೇತಿ ಶಿಬಿರಕ್ಕೆ ಒಬ್ಬರಿಗೆ (21 ದಿನಗಳ ಅವಧಿಗೆ) | 2,900–00 | **3,000–00** |
| 2 | ಪರಿಣಿತ ಈಜು ತರಬೇತಿ ಶಿಬಿರ Advance Camp (30 ದಿನಗಳ ಅವಧಿಗೆ) | 3,600–00 | **4,000–00** |
| 3 | ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ಇವರು ಪ್ರತಿ ವರ್ಷ ಹಾಲಿ ದರದ ಮೇಲೆ ರೂ.250–00ಗಳನ್ನು ಹೆಚ್ಚಿಸಿ ಹೊಸ ದರವನ್ನು ನಿಗದಿಪಡಿಸುವುದು | | |

| ಮುಂದುವರೆದು ಈ ಕೆಳಕಂಡಂತೆ ಸಿಂಡಿಕೇಟ್ ತೀರ್ಮಾನಿಸಿತು. | |
|---|---|
| 1 | 70 ಜನರಿರುವ ಒಂದು ತಂಡದ ವಿಶೇಷ ಈಜು ಶಿಬಿರದಲ್ಲಿ ಭಾಗವಹಿಸುವ ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಐವರು ಮಕ್ಕಳಿಗೆ ಪ್ರತಿಯೊಂದು ತಂಡಕ್ಕೂ ಮೊದಲ ಆದ್ಯತೆ ನೀಡುವುದರ ಆಧಾರದಲ್ಲಿ ನಿರ್ದೇಶಕರು ಪ್ರತಿ ವರ್ಷ ಸೂಚಿಸುವ ದರದಲ್ಲಿ ಅರ್ಧದಷ್ಟು ರಿಯಾಯಿತಿ ನೀಡುವುದು. |
| 2 | ವಿಶೇಷ ಈಜು ತರಬೇತಿ ಶಿಬಿರಕ್ಕೆ ಹೆಚ್ಚು ಬೇಡಿಕೆ ಬಂದಲ್ಲಿ, ಹತ್ತು ಮಂದಿ ಅಭ್ಯರ್ಥಿಗಳನ್ನು ಹೆಚ್ಚಿಸಿಕೊಳ್ಳಲು ನಿರ್ದೇಶಕರ ವಿವೇಚನಾಧಿಕಾರ ಒಳಪಡಿಸುವುದು. |
| 3 | ಮುಂಚಿತವಾಗಿ ವಿಶ್ವವಿದ್ಯಾನಿಲಯದ ಅನುಮತಿ ಪಡೆದು ಈಜುಕೊಳಕ್ಕೆ ಯಾವುದೇ ರೀತಿಯಲ್ಲಿಯೂ ಹಾನಿಯಾಗದೆ ಈಜು ಸ್ಪರ್ಧೆ/ ಚಿತ್ರೀಕರಣಕ್ಕೆ ಅವಕಾಶ ಕಲ್ಪಿಸುವುದು ಮತ್ತು ಯಾವುದೇ ಅನುಮತಿಯನ್ನು ರದ್ದು ಮಾಡುವ ಅಧಿಕಾರವು ವಿಶ್ವವಿದ್ಯಾನಿಲಯದ ಆಡಳಿತಕ್ಕೊಳಪಟ್ಟಿರುತ್ತದೆ. |

| | |
|---|---|
| **2018/2.35** | ಶ್ರೀ ಎನ್.ಎ.ಉಮೇಶ್, ಸಹಾಯಕ ಅಭಿಯಂತರರು, ಇವರ ಹುದ್ದೆಯನ್ನು ದಿನಾಂಕ 01–06–2006ರಿಂದ ಜಾರಿಗೆ ಬಂದಂತೆ ಕಿರಿಯ ಅಭಿಯಂತರರ ಹುದ್ದೆಯಿಂದ ಸಹಾಯಕ ಅಭಿಯಂತರರ ಹುದ್ದೆಗೆ ಮಾರ್ಪಡಿಸಿರುವ ಕುರಿತು. |
| **ತೀರ್ಮಾನ** | ಶ್ರೀ ಎನ್.ಎ.ಉಮೇಶ್, ಸಹಾಯಕ ಅಭಿಯಂತರರು, ಇವರ ಹುದ್ದೆಯನ್ನು ದಿನಾಂಕ 01–06–2006ರಿಂದ ಜಾರಿಗೆ ಬಂದಂತೆ ಕಿರಿಯ ಅಭಿಯಂತರರ ಹುದ್ದೆಯಿಂದ ಸಹಾಯಕ ಅಭಿಯಂತರರ ಹುದ್ದೆಗೆ ಮಾರ್ಪಡಿಸಿರುವ ಸಂಬಂಧ, ತಾಂತ್ರಿಕ ವಿಭಾಗದಲ್ಲಿ ಕಿರಿಯ ಅಭಿಯಂತರರ ಹುದ್ದೆ ಇರುವುದಿಲ್ಲ. ಆದರೆ, ವಿಶ್ವವಿದ್ಯಾನಿಲಯ ತಾಂತ್ರಿಕ ವಿಭಾಗದಲ್ಲಿ ಕಿರಿಯ ಅಭಿಯಂತರರ ಹುದ್ದೆಯನ್ನು ಸಹಾಯಕ ಅಭಿಯಂತರ ಹುದ್ದೆಯಾಗಿ ಉನ್ನತೀಕರಿಸಿರುವುದರಿಂದ,ಸದರಿ ಉದ್ಯೋಗಿಗೆ ನೀಡಲಾಗಿರುವ ಪದೋನ್ನತಿಯನ್ನು ಹಿಂಪಡೆಯುವ ಹಾಗೂ ನೀಡಲಾಗಿರುವ ಹೆಚ್ಚುವರಿ ವೇತನವನ್ನು ವಸೂಲಿ ಮಾಡುವ ಕುರಿತು ವಿಶ್ವವಿದ್ಯಾನಿಲಯದ ಕಾನೂನು ಸಲಹೆಗಾರರು ನೀಡಿರುವ ಅಭಿಪ್ರಾಯವನ್ನು ಪರಿಶೀಲಿಸಿದ ಸಿಂಡಿಕೇಟ್ ಸುದೀರ್ಘವಾಗಿ ಚರ್ಚಿಸಿ ಈಗಾಗಲೇ ಸಹಾಯಕ ಅಭಿಯಂತರರ ಹುದ್ದೆಯನ್ನು 1–6–2006ರಿಂದ ಜಾರಿಗೆ ಬಂದಂತೆ ವಿಸ್ತರಿಸಿರುವುದರಿಂದ ಶ್ರೀ ಎನ್.ಎ.ಉಮೇಶ್ ಇವರಿಗೆ ನೀಡಿರುವ ಹುದ್ದೆಯ ಪದನಾಮವನ್ನು ಮಾರ್ಪಡಿಸುವುದರ ಬದಲಿಗೆ ಸದರಿ ಉದ್ಯೋಗಿಯನ್ನು ಸಹಾಯಕ ಅಭಿಯಂತರರ ಸೇವಾ ಹಿರಿತನವನ್ನು ಜೇಷ್ಠತಾಪಟ್ಟಿಯಕೊನೆಯಲ್ಲಿಟ್ಟು ಇವರಿಗೆ ನಿಯಮಾನುಸಾರ ಪ್ರಸ್ತುತ ಚಾಲ್ತಿಯಲ್ಲಿರುವ ಹೊಸ ಪಿಂಚಣಿ ಸ್ಕೀಂ (New Pension Scheme) ಅಡಿಯಲ್ಲಿ ಪಿಂಚಣಿ ಸೌಲಭ್ಯವನ್ನು ನೀಡಲು ಸಿಂಡಿಕೇಟ್ |

| | |
|---|---|
| | ತೀರ್ಮಾನಿಸಿತು. |
| **2018/2.36** | ಪ್ಯಾಕೇಜ್ ಕಾಮಗಾರಿಗಳ ಬಾಕಿ ಹುಂಡಿಯ ಮೊತ್ತವನ್ನು ಪಾವತಿ ಮಾಡುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಕೈಗೊಂಡಿರುವ ಕ್ರೋಢೀಕೃತ ಕಾಮಗಾರಿಗಳ ಬಾಕಿ ಉಳಿಕೆ ಮೊತ್ತವನ್ನು ವಿವಿಧ ಶೀರ್ಷಿಕೆಯಡಿಯಲ್ಲಿ ಭರಿಸಲು ಪರಿಷ್ಕೃತ ಆದೇಶವನ್ನು ನೀಡಬೇಕೆಂದು ಕಾರ್ಯಪಾಲಕ ಅಭಿಯಂತರರು ಕೋರಿರುವುದನ್ನು ಪರಿಶೀಲಿಸಿದ ಸಭೆಯು ಮತ್ತೊಮ್ಮೆ ಪ್ಯಾಕೇಜ್ ಕಾಮಗಾರಿಗಳನ್ನು ಪರಿಶೀಲಿಸಿ, ಬಾಕಿ ಹುಂಡಿಯ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು ಕೋರಿರುವಂತೆ ಪರೀಕ್ಷಾಖಾತೆ ಮತ್ತು ಐ.ಡಿ.ಎಫ್. ಖಾತೆಗಳಿಂದ ಭರಿಸಲು ಸಿಂಡಿಕೇಟ್ ಅನುಮೋದಿಸಿತು. |
| **2018/2.37** | 2016–17ನೇ ಸಾಲಿನಲ್ಲಿ ಸಾಮಾನ್ಯ ಡಿಪ್ಲೊಮಾ/ಪಿ.ಜಿ. ಡಿಪ್ಲೊಮಾದಲ್ಲಿ ವ್ಯಾಸಂಗ ಮಾಡುತ್ತಿದ್ದ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಮತ್ತು ಪ್ರವೇಶಾತಿ ಶುಲ್ಕದ ಕುರಿತು |
| **ತೀರ್ಮಾನ** | 2016–17ನೇ ಸಾಲಿನಲ್ಲಿ ಸಾಮಾನ್ಯ ಡಿಪ್ಲೊಮಾ/ಪಿ.ಜಿ. ಡಿಪ್ಲೊಮಾದಲ್ಲಿ ವ್ಯಾಸಂಗ ಮಾಡುತ್ತಿದ್ದ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಕ್ಕೆ ಸೇರಿದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಮತ್ತು ಪ್ರವೇಶಾತಿ ನೀಡಿದ್ದು, ಸದರಿ ಶೈಕ್ಷಣಿಕ ಸಾಲಿನ ಮಧ್ಯಭಾಗದಲ್ಲಿ ವೃತ್ತಿಪರ ಮತ್ತು ತಾಂತ್ರಿಕ ಕೋರ್ಸುಗಳನ್ನು ಹೊರತುಪಡಿಸಿ, ಡಿಪ್ಲೊಮಾ ಕೋರ್ಸುಗಳಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡುವುದಿಲ್ಲವೆಂದು ಸರ್ಕಾರ ಸುತ್ತೋಲೆ ಹೊರಡಿಸಿದ್ದು, ಈ ಸಂಬಂಧ, ಡಿಪ್ಲೊಮಾ ವಿದ್ಯಾರ್ಥಿಗಳ ವಿದ್ಯಾರ್ಥಿವೇತನವನ್ನು ಬಿಡುಗಡೆಗೊಳಿಸಲು ಸರ್ಕಾರಕ್ಕೆ ಮತ್ತೊಮ್ಮೆ ಮನವಿ ಮಾಡಿ, ಸರ್ಕಾರದಿಂದ ಬಿಡುಗಡೆಗೊಂಡರೆ ವಿದ್ಯಾರ್ಥಿಗಳ ಅಂಕಪಟ್ಟಿಯನ್ನು ವಿತರಿಸಲು ಒಪ್ಪಲಾಯಿತು. ಒಂದು ವೇಳೆ ಸರ್ಕಾರವು ವಿದ್ಯಾರ್ಥಿವೇತನವನ್ನು ಬಿಡುಗಡೆಗೊಳಿಸದಿದ್ದಲ್ಲಿ ಭೋಜನಾ ವೆಚ್ಚ ರೂ. 17,26,951/– ಹಾಗೂ ಪ್ರವೇಶಾತಿ ಶುಲ್ಕ ರೂ. 14,07,795/–ಗಳನ್ನು ವಿಶ್ವವಿದ್ಯಾನಿಲಯದ ವತಿಯಿಂದ ಭರಿಸಿ, ಹೊಂದಾಣಿಕೆ ಮಾಡಿಕೊಳ್ಳಲು ನಿರ್ಣಯಿಸಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. ಆದಾಗ್ಯೂ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ ಹೊರೆಯನ್ನು ತಪ್ಪಿಸುವುದು ಮತ್ತು ವಿದ್ಯಾರ್ಥಿಗಳಿಗೆ ಅವಶ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕಷ್ಟವಾಗುವುದರಿಂದ ಸಿಂಡಿಕೇಟ್ ಈ ಕೆಳಕಂಡನಿರ್ಣಯಗಳನ್ನು ಸಹ ಕೈಗೊಂಡಿತು.<br>1. ಸರ್ಕಾರಕ್ಕೆ ಮತ್ತೊಮ್ಮೆ ಹಣ ಬಿಡುಗಡೆಗೊಳಿಸಿಕೊಡುವಂತೆ ವಿವರವಾಗಿ ಜ್ಞಾಪನಾ ಪತ್ರವನ್ನು ಬರೆಯುವುದು.<br>2. ವಿಶ್ವವಿದ್ಯಾನಿಲಯದಲ್ಲಿರುವ SC & ST ವಿಭಾಗದ ಉಪಕುಲಸಚಿವರು, ವಿದ್ಯಾರ್ಥಿಕ್ಷೇಮಪಾಲನಾ ಕಚೇರಿಯ ನಿರ್ದೇಶಕರು, ಆಡಳಿತಾಧಿಕಾರಿ, ಮಾನಸಗಂಗೋತ್ರಿ, ಮೈಸೂರು ಅವರು ಸರ್ಕಾರದ ಅಧಿಕಾರಿಗಳೊಡನೆ ಚರ್ಚಿಸಿ ಬರಬೇಕಾದ ವಿದ್ಯಾರ್ಥಿವೇತನವನ್ನು ತರಿಸಿಕೊಳ್ಳುವ ಪ್ರಯತ್ನವನ್ನು ಮಾಡುವುದು. |
| **2018/2.38** | ಡಾ, ಭಾರತಿ ಪಿ. ಸಾಲಿಮಠ್, ಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ ಅವರ ಖಾಯಂಪೂರ್ವ ಪರೀಕ್ಷಾರ್ಥ ಸೇವಾವಧಿಯನ್ನು ಘೋಷಿಸುವ ಬಗ್ಗೆ. |
| **ತೀರ್ಮಾನ** | ಡಾ. ಭಾರತಿ ಪಿ. ಸಾಲಿಮಠ್, ಪ್ರಾಧ್ಯಾಪಕರು, ಜೈವಿಕ ತಂತ್ರಜ್ಞಾನ ಅಧ್ಯಯನ ವಿಭಾಗ, ಅವರ ಖಾಯಂ ಪೂರ್ವ ಪರೀಕ್ಷಾರ್ಥ ಸೇವಾವಧಿಯನ್ನು ದಿನಾಂಕ 08–10–2010ರಿಂದ ಜಾರಿಗೆ ಬಂದಂತೆ ಘೋಷಿಸುವ ಸಂಬಂಧದ ವಿಷಯವನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/2.39** | ರಾಜ್ಯದಲ್ಲಿ ಬರಪರಿಸ್ಥಿತಿಯ ಸಂದರ್ಭದಲ್ಲಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳ ಶಿಕ್ಷಣ ಶುಲ್ಕ ವೆಚ್ಚವನ್ನು ವಿಶ್ವವಿದ್ಯಾನಿಲಯ ಆಂತರಿಕ ಸಂಪನ್ಮೂಲದಿಂದ ಭರಿಸುವ ಬಗ್ಗೆ. |
| **ತೀರ್ಮಾನ** | ರಾಜ್ಯದಲ್ಲಿ ಬರಪರಿಸ್ಥಿತಿಯ ಸಂದರ್ಭದಲ್ಲಿ ಸ್ನಾತಕೋತ್ತರ ಪದವಿ ಹಂತದವರೆಗೆ ರಾಜ್ಯದ ವಿಶ್ವವಿದ್ಯಾನಿಲಯಗಳಲ್ಲಿ/ ಸರ್ಕಾರಿ/ ಖಾಸಗಿ ಅನುದಾನಿತ ಹಾಗೂ ಖಾಸಗಿ ಅನುದಾನರಹಿತ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳ ಶಿಕ್ಷಣ ಶುಲ್ಕ ಮತ್ತು ವಸತಿ ವೆಚ್ಚವನ್ನು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಎಲ್ಲಾ ಕಾಲೇಜುಗಳಲ್ಲಿ ಜಾರಿಗೆ ತರಲು ಹಾಗೂ ಸದರಿ ವೆಚ್ಚವನ್ನು ಆಯಾ ವಿಶ್ವವಿದ್ಯಾನಿಲಯ/ಶಿಕ್ಷಣ ಸಂಸ್ಥೆಗಳೇ ಭರಿಸುವಂತೆ ಮತ್ತು ಸರ್ಕಾರಿ |

| | |
|---|---|
| | ಆದೇಶವನ್ನು ಅನುಷ್ಠಾನಗೊಳಿಸಲು ಸಿಂಡಿಕೇಟ್ ಅನುಮೋದಿಸಿತು. |
| **2018/2.40** | ಮೈಸೂರು ಸಿ.ಟಿ. ಕುರುಬಾರಹಳ್ಳಿಯಲ್ಲಿರುವ ವಿಶ್ವವಿದ್ಯಾನಿಲಯದ ಜಮೀನಿಗೆ ಸಂಬಂಧಿಸಿದಂತೆ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿರುವ ಸಿವಿಲ್ ಅಪಿಲ್ ಸಂಖ್ಯೆ:170–173/2011 ಪ್ರಕರಣದ ಅಂತಿಮ ವಿಚಾರಣೆಗೆ ದಿನಾಂಕ 20–02–2018 ರಂದು ನವದೆಹಲಿಗೆ ಹೋಗಿ ಬರಲು ವಿಶ್ವವಿದ್ಯಾನಿಲಯದ ಅಧಿಕಾರಿ/ ಸಂಬಂಧಿಸಿದ ಇಲಾಖೆಯ ಸಿಬ್ಬಂದಿಗಳಿಗೆ ವಿಮಾನಯಾನದ ವೆಚ್ಚ ಮತ್ತು ಇತರೆ ವಾಸ್ತವಿಕ ವೆಚ್ಚದ ಮಂಜೂರಾತಿ ಬಗ್ಗೆ. |
| **ತೀರ್ಮಾನ** | ಮೈಸೂರು ಸಿ.ಟಿ. ಕುರುಬಾರಹಳ್ಳಿಯಲ್ಲಿರುವ ವಿಶ್ವವಿದ್ಯಾನಿಲಯದ ಜಮೀನಿಗೆ ಸಂಬಂಧಿಸಿದಂತೆ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿರುವ ಸಿವಿಲ್ ಅಪಿಲ್ ಸಂಖ್ಯೆ:170–173/2011 ಪ್ರಕರಣದ ಅಂತಿಮ ಹಂತದ ವಿಚಾರಣೆಗೆ ಕುರಿತಂತೆ ಸರ್ವೋಚ್ಚ ನ್ಯಾಯಾಲಯದ ವಿಶ್ವವಿದ್ಯಾನಿಲಯದ ಪರ ವಾದಿಸುವ ವಕೀಲರಿಗೆ ದಾಖಲೆಗಳನ್ನು ಹಾಗೂ ಮಾಹಿತಿಯನ್ನು ಖುದ್ದಾಗಿ ಒದಗಿಸಲು ಮತ್ತು ಹಾಜರಿರಲು ದಿನಾಂಕ 20–02–2018ರಂದು ವಿಶ್ವವಿದ್ಯಾನಿಲಯ/ಸಂಬಂಧಪಟ್ಟ ಇಲಾಖೆಯ ಅಧಿಕಾರಿ / ಸಿಬ್ಬಂದಿಗಳು ನವದೆಹಲಿಗೆ ಹೋಗಿ ಬರಲು ವಿಮಾನಯಾನದರ ಮತ್ತು ಇತರೆ ವಾಸ್ತವಿಕ ವೆಚ್ಚವನ್ನು ಭರಿಸಲು ಸಿಂಡಿಕೇಟ್ ಘಟನೋತ್ತರವಾಗಿ ಅನುಮತಿಸಿತು. |
| **2018/2.41** | 2017–18ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿ ಎರಡನೇ ಸಭೆಯ ನಡಾವಳಿಯನ್ನು ಅನುಮೋದಿಸುವ ಬಗ್ಗೆ. |
| **ತೀರ್ಮಾನ** | ದಿನಾಂಕ 27.02.2018 ರಂದು ಜರುಗಿದ 2017–18ನೇ ಸಾಲಿನ ವಿಶ್ವವಿದ್ಯಾನಿಲಯದ ಕ್ರೀಡಾ ಸಮಿತಿಯ ಎರಡನೇ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಅನುಮೋದಿಸಿತು. ಮುಂದುವರೆದು, ವಿದ್ಯಾರ್ಥಿಗಳು ಭಾನುವಾರದ ರಜಾದಿನದಂದು ಈಜುಕೊಳಕ್ಕೆ ಪ್ರವೇಶ ಬಯಸುವುದರಿಂದ, ಭಾನುವಾರಗಳಂದು ವಿದ್ಯಾರ್ಥಿಗಳಿಗೆ, ವಿಶ್ವವಿದ್ಯಾನಿಲಯದ ಉದ್ಯೋಗಿಗಳು ಮತ್ತು ಪಾಸ್‌ಗಳನ್ನು ಹೊಂದಿರುವವರಿಗೆ ಈಜುಕೊಳಕ್ಕೆ ಪ್ರವೇಶ ನೀಡುವ ಸಲುವಾಗಿ ಭಾನುವಾರದಂದು ಕರ್ತವ್ಯದ ದಿನವನ್ನಾಗಿಯೂ ಮತ್ತು ಇದರ ಬದಲಿಗೆ ಸೋಮವಾರದಂದು ವಾರದ ರಜೆಯೆಂದು ಘೋಷಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/2.42** | 2018–19ನೇ ಸಾಲಿನಲ್ಲಿ ನಡೆಯಲಿರುವ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ರಚನೆ ಮಾಡಿರುವ ಪರೀಕ್ಷಾ ಮಂಡಳಿ ಬಗ್ಗೆ. |
| **ತೀರ್ಮಾನ** | 2018–19ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳು ಮೇ/ಜೂನ್ ಮಾಹೆಯಿಂದ ಪ್ರಾರಂಭಗೊಳ್ಳಲಿದ್ದು, ಈ ಹಿನ್ನೆಲೆಯಲ್ಲಿ ಪ್ರಶ್ನೆ ಪತ್ರಿಕೆಗಳನ್ನು ತುರ್ತಾಗಿ ಸಿದ್ದಪಡಿಸಬೇಕಾಗಿರುವುದರಿಂದ, ಸಿಂಡಿಕೇಟ್ ಸಭೆಯ ಅನುಮೋದನೆಯನ್ನು ಕಾಯ್ದಿರಿಸಿ, ವಿಶ್ವವಿದ್ಯಾನಿಲಯದ ಕಾಯ್ದೆ 2000 ಪ್ರಕರಣ 36ರ ಅನ್ವಯ, ಪರೀಕ್ಷಾ ಅಧ್ಯಯನ ಮಂಡಳಿಗಳನ್ನು BOAE ರಚಿಸಿ ಅಧಿಸೂಚನೆಗಳನ್ನು ಹೊರಡಿಸಿರುವ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |
| **2018/2.43** | 2018–19ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಕೇಂದ್ರ ಹೇಮಗಂಗೋತ್ರಿ, ಹಾಸನ, ಇಲ್ಲಿ ಎಂ.ಬಿ.ಎ. ಕೋರ್ಸನ್ನು ಪ್ರಾರಂಭಿಸುವ ಬಗ್ಗೆ. |
| **ತೀರ್ಮಾನ** | 2018–19ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಕೇಂದ್ರ, ಹೇಮಗಂಗೋತ್ರಿ, ಹಾಸನ ಇಲ್ಲಿ ಎಂ.ಬಿ.ಎ ಕೋರ್ಸ್‌ನ್ನು ಪ್ರಾರಂಭಿಸುತ್ತಿರುವ ಸಂಬಂಧ ಹಾಸನ ಮತ್ತು ಚಾಮರಾಜನಗರ ಸ್ನಾತಕೋತ್ತರ ಕೇಂದ್ರಗಳಲ್ಲಿ ಖಾಯಂ ಅಧ್ಯಾಪಕರಿಲ್ಲದಿರುವುದರಿಂದ ಬಹದ್ದೂರ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಸೈನ್ಸ್ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಬ್ಬರು ಖಾಯಂ ಅಧ್ಯಾಪಕರನ್ನು ಒಂದು ಸೆಮಿಸ್ಟರ್ ಅವಧಿಗೆ ಜೇಷ್ಠತೆ ಅನುಸಾರ ಸರದಿಯ ಆಧಾರದ ಮೇಲೆ ಚಾಮರಾಜನಗರ, ಹಾಸನ ಸ್ನಾತಕೋತ್ತರ ಕೇಂದ್ರಗಳಿಗೆ ನಿಯೋಜಿಸುವುದು. ಮತ್ತು ಸ್ನಾತಕೋತ್ತರ ಕೇಂದ್ರಗಳಲ್ಲಿ ಬೋಧಿಸುತ್ತಿರುವ ಇತರೆ ವಿಷಯಗಳಿಗೂ ಸಹ ಅನ್ವಯವಾಗುವಂತೆ ಖಾಯಂ ಅಧ್ಯಾಪಕರನ್ನು ಜೇಷ್ಠತೆಯ ಅನುಸಾರ ಒಂದು ಸೆಮಿಸ್ಟರ್ ಅವಧಿಗೆ ಸರದಿಯ ಅನುಸಾರ ನಿಯೋಜಿಸುವಂತೆಯೂ ತೀರ್ಮಾನಿಸಲಾಯಿತು. ಹಾಗೂ 2018–19ನೇ ಶೈಕ್ಷಣಿಕ ಸಾಲಿನ ಮಾಹಿತಿ ಪುಸ್ತಿಕೆಯಲ್ಲಿ(Prospectus) ಎಂ.ಬಿ.ಎ. ಕೋರ್ಸನ್ನು ಪ್ರಾರಂಭಿಸುವ ಬಗ್ಗೆ ಸೇರ್ಪಡಿಸುವ |

| | |
|---|---|
| | ವಿಷಯವನ್ನು ಸಿಂಡಿಕೇಟ್ ಅನುಮೋದಿಸಿತು. |
| **2018/2.44** | B.Sc Honor's Degree in Molecular biology ಪದವಿ ಪ್ರದಾನ ಮಾಡುವ ಬಗ್ಗೆ. |
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ 5 ವರ್ಷದ ಇಂಟಿಗ್ರೇಟೆಡ್ ಕೋರ್ಸಿಗೆ (M.Sc in Molecular Biology) ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ಪ್ರಕರಣ 42(2)ರ ಅಡಿಯಲ್ಲಿ ವಿನಿಯಮಾವಳಿಗಳಿಗೆ ಘನತೆವೆತ್ತ ರಾಜ್ಯಪಾಲರ ಅಂಕಿತ ದೊರಕಿದ್ದು, ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜು (ಸ್ವಾಯತ್ತ), ಮೈಸೂರು ಇಲ್ಲಿರುವ Molecular Biology ವಿಷಯದಲ್ಲಿ ಐದು ವರ್ಷದ ಇಂಟಿಗ್ರೇಟೆಡ್ ಕೋರ್ಸಿನಲ್ಲಿ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ (M.Sc in Molecular Biology)ಮತ್ತುMolecular Biology ಇಂಟಿಗ್ರೇಟೆಡ್ ಕೋರ್ಸ್‌ನ್ನು ನಾಲ್ಕು ವರ್ಷದ ಚತುರ್ಮಾಸ ಕೋರ್ಸ್ ಉತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ B.Sc Honor's Degree in Molecular biology ಪದವಿ ಪ್ರದಾನ ಮಾಡುವ ಬಗ್ಗೆ ಈಗಾಗಲೇ ಕಾಲೇಜಿನ ಮತ್ತು ವಿಶ್ವವಿದ್ಯಾನಿಲಯದ ವಿದ್ಯಾವಿಷಯಕ ಪರಿಷತ್ ಸಭೆಗಳೆರಡಲ್ಲೂ ತೀರ್ಮಾನಿಸಿರುವುದನ್ನು ಪರಿಶೀಲಿಸಿದ ಸಿಂಡಿಕೇಟ್ ಸಹ ಅನುಮೋದಿಸಿತು. |
| **2018/2.45** | ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ, ಸಂಶೊಧನ ಮತ್ತು ವಿಸ್ತರಣಾ ಕೇಂದ್ರಕ್ಕೆ ಹೆಚ್ಚುವರಿ ಅನುದಾನವನ್ನು ಹಾಗೂ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಸರ್ಕಾರದ ವತಿಯಿಂದ ಅನುದಾನವನ್ನು ಕೋರುತ್ತಿರುವ ಬಗ್ಗೆ. |
| **ತೀರ್ಮಾನ** | ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ, ಸಂಶೋಧನೆ ಮತ್ತು ವಿಸ್ತರಣಾ ಕೇಂದ್ರವು ಈಗಾಗಲೇ ಕಾರ್ಯಪ್ರವೃತ್ತವಾಗಿದ್ದು ಅಧ್ಯಯನ ಮತ್ತು ಸಂಶೋಧನೆಗೆ ಅನುವಾಗುವಂತೆ ಮತ್ತಷ್ಟು ಪರಿಣಾಮಕಾರಿಯಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉದ್ದೇಶದಿಂದ ಈಗಾಗಲೇ ಸರ್ಕಾರ ನೀಡಿರುವ ರೂ. 1.00 ಕೋಟಿ ಮೊತ್ತವನ್ನು ರೂ. 5.00 ಕೋಟಿಗಳಿಗೆ ಹೆಚ್ಚಿಸಲು ಕೋರಿರುವ ಪ್ರಸ್ತಾವನೆ ಮತ್ತು ತನ್ನದೇ ಆದ ಪ್ರತ್ಯೇಕ ಕಟ್ಟಡವನ್ನು ಹೊಂದುವ ಉದ್ದೇಶದಿಂದ ಹೆಚ್ಚುವರಿಯಾಗಿ ಸರ್ಕಾರಕ್ಕೆ ರೂ.700.00 ಲಕ್ಷಗಳನ್ನು ಬಿಡುಗಡೆ ಮಾಡಲು ಕೋರಿ ಅನುದಾನವನ್ನು ಕೋರುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಹಾಗೂ ಮಾನ್ಯ ಮುಖ್ಯಮಂತ್ರಿಗಳಿಗೆ ಸಲ್ಲಿಸಲು ಮತ್ತು ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಈಗಾಗಲೇ ಸ್ಥಳ ಪರಿಶೀಲನೆ ನಡೆಸಿ ವರದಿ ನೀಡಲು ಕಾರ್ಯಪಾಲಕ ಅಭಿಯಂತರರಿಗೆ ಪತ್ರಮುಖೇನ ಸೂಚಿಸಲಾಗಿದ್ದು ಅವರು ನೀಡುವ ವರದಿಯಂತೆಗಂಗೋತ್ರಿ ಆವರಣದಲ್ಲಿನ ಜಾಗವನ್ನು ನೀಡಲು ಸಿಂಡಿಕೇಟ್ ತೀರ್ಮಾನಿಸಿತು. |
| **2018/2.46** | ನಾಲ್ವರು ಸಂಶೋಧನಾ ಅಭ್ಯರ್ಥಿಗಳು ಹೆಚ್ಚುವರಿ ಸಂಶೋಧನಾ ಅವಧಿ ವಿಸ್ತರಣೆ ಕೋರಿರುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದಲ್ಲಿ ಪಿಹೆಚ್.ಡಿ.ಸಂಶೋಧನಾ ಕಾರ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಅಭ್ಯರ್ಥಿಗಳು ಪಿಹೆಚ್.ಡಿ ನಿಯಮಾವಳಿಯನ್ವಯ, ಸಂಶೋಧನಾ ಅವಧಿ 07 ವರ್ಷಗಳ ಒಳಗೆ ಮಹಾಪ್ರಬಂಧವನ್ನು ಸಲ್ಲಿಸಬೇಕಾಗಿದ್ದು ಕಾರಣಾಂತರಗಳಿಂದ ಸಲ್ಲಿಸದೇ ಮಹಾಪ್ರಬಂಧವನ್ನು ಸಲ್ಲಿಸಲು ಕಾಲಾವಕಾಶ ಕೋರಿರುವುದನ್ನು ಪರಿಶೀಲಿಸಿದ ಸಭೆಯು, ಸದರಿಯವರುಗಳಿಗೆ ಒಂದು ವರ್ಷದ ಬದಲು, **03 ತಿಂಗಳ ಕಾಲಾವಕಾಶವನ್ನು ನೀಡಿ, ದಂಡಶುಲ್ಕ ರೂ.15,000/–ಗಳೊಂದಿಗೆ** ಮಹಾಪ್ರಬಂಧವನ್ನು ಸಲ್ಲಿಸಲು ಸಿಂಡಿಕೇಟ್ ತೀರ್ಮಾನಿಸಿತು.<br>1. ಡಿ.ಪಿ.ಉಮೇಶ್, ವಾಣಿಜ್ಯಶಾಸ್ತ್ರ<br>2. ಎನ್.ಜಿ.ಲೋಕೇಶ್, ಅರ್ಥಶಾಸ್ತ್ರ<br>3. ಎ.ಎಸ್.ನಾಗರತ್ನ, ಅರ್ಥಶಾಸ್ತ್ರ<br>4. Kourosh Davoodi, ವಿದೇಶಿ ಅಭ್ಯರ್ಥಿ, ಎಲೆಕ್ಟ್ರಾನಿಕ್ಸ್. |
| **2018/2.47** | 2017ರ ಪಿಹೆಚ್.ಡಿ ನಿಯಮಾವಳಿಯ ತಿದ್ದುಪಡಿಯ ಬಗ್ಗೆ. |
| **ತೀರ್ಮಾನ** | 1. ಪಿಹೆಚ್.ಡಿ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಕೆಲ ವಿದ್ಯಾರ್ಥಿಗಳು ಕೇವಲ ಕೆಲವೇ ಅಂಕಗಳ ಕೊರತೆಯಿಂದಾಗಿ ಸಂಶೋಧನೆಗೆ ಅರ್ಹರಾಗುತ್ತಿಲ್ಲವಾದ್ದರಿಂದ ವಿದ್ಯಾರ್ಥಿಗಳ ಭವಿಷ್ಯದ |

| | |
|---|---|
| | ಹಿತದೃಷ್ಟಿಯಿಂದ ಮರುಮೌಲ್ಯಮಾಪನ ಭಾಗ–2ಕ್ಕೆ ಅವಕಾಶ ನೀಡಲು ವಿದ್ಯಾವಿಷಯಕ ಪರಿಷತ್ತು ಒಪ್ಪಿಗೆ ನೀಡಿರುವುದನ್ನು ಸಿಂಡಿಕೇಟ್ ಅನುಮೋದಿಸಿತು.<br>2. ಪ್ರಸ್ತುತ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಕನಿಷ್ಠ 55 ಅಂಕ, ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ಕ್ಕೆ 50 ಅಂಕಗಳನ್ನು ನಿಗಧಿಪಡಿಸಲಾಗಿದ್ದು ಈ ಸಂಬಂಧ ಪಿಎಚ್.ಡಿ. ರೆಗ್ಯೂಲೇಷನ್ಸ್ ರಚಿಸುವ ಸಂದರ್ಭದಲ್ಲಿ ಯು.ಜಿ.ಸಿ.ಯಿಂದ ಹಿಂದುಳಿದ ವರ್ಗಗಳಿಗೂ ಶೇ. 5ರಷ್ಟು ಅಂಕಗಳನ್ನು ವಿನಾಯಿತಿ ನೀಡುವಂತೆ ಪ್ರಕಟಣೆ ಹೊರಡಿಸಲಾಗಿರುವುದನ್ನು ಗಮನಿಸಿದ ಸಿಂಡಿಕೇಟ್ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿಪಿಎಚ್.ಡಿ. ಪ್ರವೇಶಕ್ಕೆ ಮಾತ್ರ ಸೀಮಿತಗೊಂಡಂತೆ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೂ 50 ಅಂಕಗಳನ್ನು ನಿಗಧಿಪಡಿಸಲು ತೀರ್ಮಾನಿಸಿತು.<br>3. ಮತ್ತು ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಶೇ.45ಕ್ಕೆ ಅಂಕಗಳನ್ನು ನಿಗಧಿಪಡಿಸಿ ಈ ಸಂಬಂಧದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಲು ಮತ್ತು ಯು.ಜಿ.ಸಿ.ಗೆ ಪತ್ರ ಬರೆದು ಅನುಮತಿ ಪಡೆಯಲು ಸಹ ಸಿಂಡಿಕೇಟ್ ತೀರ್ಮಾನಿಸಿತು.<br>4. Regarding plagiarism a candidate has to procure a certificate for the test conducted on the thesis from the University Librarian. The percentage of similar contents of the thesis must be within 30% should be changed as SHALL NOT EXCEEDಎಂದು ತಿದ್ದುಪಡಿ ಮಾಡಲು ವಿದ್ಯಾವಿಷಯಕ ಪರಿಷತ್ತು ಒಪ್ಪಿಗೆ ನೀಡಿರುವುದನ್ನು ಸಿಂಡಿಕೇಟ್ ಅನುಮೋದಿಸಿತು. |

**ಇತರೆ ವಿಷಯಗಳು:**

1. ಪ್ರೊ. ವೆಂಕಟೇಶ್.ಬಿ.ಎಂ., ಸಹ ಪ್ರಾಧ್ಯಾಪಕ, ಯುವರಾಜ ಕಾಲೇಜು, ಇವರು ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆ ಬರುವಂತೆ ಹೇಳಿಕೆಗಳನ್ನು ಪತ್ರಿಕೆಗಳಿಗೆ ನೀಡುತ್ತಿರುವುದರಿಂದ ಸದರಿರವರನ್ನು ಪರೀಕ್ಷಾ ಕಾರ್ಯ ನಿರ್ವಹಿಸದಂತೆ ನೋಟೀಸ್ ಜಾರಿ ಮಾಡಿರುವುದು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಾತ್ರ ಸೀಮಿತಗೊಂಡಿರುತ್ತದೆ.

2. ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ವಾರ್ಡನ್ ಸಿಸ್ಟಂನಲ್ಲಿ ಆಹಾರ ನೀಡುತ್ತಿರುವುದರಿಂದ ಕೆಲಸ ನಿರ್ವಹಿಸಲು ಹೆಚ್ಚಿನ ಸಿಬ್ಬಂದಿಯ ಅವಶ್ಯಕತೆಯಿರುವುದನ್ನು ಮನಗಂಡ ಸಿಂಡಿಕೇಟ್ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯನಿರ್ವಹಿಸಲು ಸರದಿಯ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ನಿಯೋಜನೆ ಮಾಡಲು ಸಿಂಡಿಕೇಟ್ ನಿರ್ಣಯಿಸಿತು.

3. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಬಿ.ಎಡ್ ಕಾಲೇಜುಗಳ ಗುಣಮಟ್ಟವನ್ನು ಉತ್ತಮಪಡಿಸುವ ದೃಷ್ಟಿಯಿಂದ ಇಂತಹ ಕಾಲೇಜುಗಳಲ್ಲಿನ ಮೂಲಭೂತ ಸೌಕರ್ಯಗಳು, ವಿದ್ಯಾರ್ಥಿಗಳ ಹಾಜರಾತಿ ಮತ್ತಿತರ ವಿವರಗಳನ್ನು ಪರಿಶೀಲಿಸಲು 5–6 ಸದಸ್ಯರನ್ನೊಳಗೊಂಡ Monitary Committeeಯನ್ನು ರಚಿಸಿ ಸದರಿ ಸಮಿತಿಯು ನೀಡುವ ವರದಿಯನ್ನು ಶಿಕ್ಷಣ

ಅಧ್ಯಯನ ಮಂಡಳಿ, ಶಿಕ್ಷಣ ನಿಕಾಯ ಹಾಗೂ ವಿದ್ಯಾವಿಷಯಕ ಪರಿಷತ್ತು ಸಭೆಯಲ್ಲಿ ಚರ್ಚಿಸಿ ಸೂಕ್ತವಾದ ನಿರ್ಣಯ ತೆಗೆದುಕೊಳ್ಳುವಂತೆ ಕ್ರಮವಹಿಸಲು ಸಿಂಡಿಕೇಟ್ ತೀರ್ಮಾನಿಸಿತು.

4. ಮೈಸೂರು ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿರುವ ಇತಿಹಾಸ ಅಧ್ಯಯನ ವಿಭಾಗದಲ್ಲಿರುವ ಕಾಂಪೌಂಡ್ ಗೋಡೆಯನ್ನು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಗಮನಕ್ಕೆ ತರದೇ, ಕೆಡವಿರುವ ಬಗ್ಗೆ ವಿವರಣೆಯನ್ನು ನೀಡುವಂತೆ ಸದರಿ ವಿಭಾಗದ ಅಧ್ಯಕ್ಷರಿಗೆ ವಿವರಣೆ ಕೋರಿ ನೋಟಿಸ್ ಜಾರಿ ಮಾಡಲು ಸಿಂಡಿಕೇಟ್ ತೀರ್ಮಾನಿಸಿತು.

ಕೊನೆಯಲ್ಲಿ ಎರಡನೇ ಸಾಮಾನ್ಯ ಸಭೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿ ತೀರ್ಮಾನ ಕೈಗೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೆ ಮಾನ್ಯ ಕುಲಪತಿಗಳು ವಂದನೆ ಸಲ್ಲಿಸಿದ ನಂತರ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/–
**ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ**

ಸಹಿ/–
**ಕುಲಪತಿ ಹಾಗೂ ಅಧ್ಯಕ್ಷರು**